ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

14 ಸೆಪ್ಟೆಂಬರ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -183 ಪುಟ-4 ಹಾಸನ | E-mail : prajodayahsn@gmail.com | RNI NO: KARKAN/2007/22629





## ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು

# ವರ್ಷದಲ್ಲಿ ರಾಜ್ಯಾದ್ಯಂತ 67 ವಸತಿ ಶಾಲೆ

### ಸಮಾಜ ಕಲ್ಯಾಣ ಇಲಾಖೆ ಸಚಿವ ಮುನಿಯಪ್ಪ ಭರವಸೆ | ಮಕ್ಕಳಿಗೆ ಪ್ರತಿಭಾ ಪುರಸ್ಕಾರ

• ಪ್ರಜೋದಯ ವರದಿ

**ಅರಸೀಕೆರೆ:** ಮುಂದಿನ ಒಂದು ವರ್ಷದಲ್ಲಿ ರಾಜ್ಯಾದ್ಯಂತ 67 ಹೋಬಳಿಗಳಲ್ಲಿ ವಸತಿ ಶಾಲೆ ಪ್ರಾರಂಭಿಸಲು ನಿರ್ಧರಿಸಿದ್ದು ಆ ಮೂಲಕ ಹಿಂದುಳಿದ ವರ್ಗಗಳ ಮಕ್ಕಳ ಶೈಕ್ಷಣಿಕ ಏಳಿಗೆಗೆ ಶ್ರಮಿಸಲಾಗುವುದೆಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಹೇಳಿದರು.

ನಗರದ ಸಿಂಧೂ ಭವನದಲ್ಲಿ ಮಾದಿಗ ಸಮುದಾಯದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗು ಸಚಿವರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ 874 ವಸತಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಪ್ರತಿ ಶಾಲೆಯಲ್ಲಿ 150 ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಉಳಿದ 67 ಕಡೆ ಹಾಸ್ಟೆಲ್ ತೆರೆಯಲಾಗುವುದು. ಡಾ.ಬಿ.ಆರ್.ಅಂಬೇಡ್ಕರ್, ಕಿತ್ತೂರು ರಾಣಿ ಚನ್ನಮ್ಮ, ಮುರಾರ್ಜಿ ದೇಸಾಯಿ ವಸತಿ ಶಾಲೆಗಳು ಮಕ್ಕಳ ಏಳಿಗೆಗೆ ಕೆಲಸ ಮಾಡುತ್ತಿವೆ. ಹೊಸ ವಸತಿ ನಿಲಯ ನಿರ್ಮಾಣ ಸಂಬಂಧ ಮುಖ್ಯಮಂತ್ರಿ ಅವರೊಂದಿಗೆ ಈಗಾಗಲೇ ಚರ್ಚಿಸಿದ್ದೇನೆಂದರು.

ಶೋಷಿತರ ಕಲ್ಯಾಣ ಶಿಕ್ಷಣದಿಂದಲೇ ಮಾತ್ರ ಸಾಧ್ಯ ಎಂಬುದನ್ನು ಸಮಾಜದ ಪ್ರತಿಯೊಬ್ಬರು ಅರಿಯಬೇಕು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಎಂಟು ದಶಕ ಕಳೆದರೂ ಸಮುದಾಯ ಮುನ್ನೆಲೆಗೆ



ಬರಲು ಸಾಧ್ಯವಾಗಿಲ್ಲ. ರಾಜಕೀಯ, ಶಿಕ್ಷಣ, ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿ ನ್ಯಾಯ ಪಡೆಯಲು ಹೋರಾಟ ನಡೆಸುವ ಅನಿವಾರ್ಯತೆ ಎದುರಾಗಿದೆ. ಇಂತಹ ಎಲ್ಲಾ ಬೆಳವಣಿಗೆಗೆ ಶಿಕ್ಷಣ ಪಡೆಯದಿರುವುದು ಪ್ರಮುಖ ಕಾರಣವಾಗಿದೆ ಎಂಬುದನ್ನು ಮರೆಯಬಾರದು. ಸಂಘಟಿತ ಪ್ರಯತ್ನ ಯಶಸ್ಸಿನ ದಾರಿಯಾಗಿದ್ದು ಒಗ್ಗಟ್ಟಿನ ಹೋರಾಟ ನಡೆಸಬೇಕು. ಹಿಂದುಳಿದಿದ್ದೇವೆ ಎನ್ನುವ ಪದವನ್ನು ತೊಲಗಿಸಬೇಕಾದ ಹೊಣೆ ನಮ್ಮದಾಗಿದ್ದು ಶೋಷಿತರ ಕಲ್ಯಾಣ ಶಿಕ್ಷಣದಿಂದಲೇ ಮಾತ್ರ ಸಾಧ್ಯವೆಂದು ಪ್ರತಿಪಾದಿಸಿದರು.

ಮುಜರಾಯಿ ಮತ್ತು ಮೀನುಗಾರಿಕೆ ಸಚಿವ ಕೆ.ಎಸ್.ಬಸವಂತಪ್ಪ ಅವರು ಮಾತನಾಡಿ, ಒಳ ಮೀಸಲಾತಿ ವರ್ಗೀಕರಣ ಪರಿಪೂರ್ಣವಾಗಿ ಅನುಷ್ಠಾನವಾದಲ್ಲಿ ಸಮುದಾಯದ ಮಕ್ಕಳಿಗೆ ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿ ಪಡೆಯಲು ಅನುಕೂಲವಾಗಲಿದೆ. ಸರ್ಕಾರ ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಿದೆ. ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರುವಂತೆ ನೋಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಬಸವಣ್ಣನವರ ಆಶಯದಂತೆ ಸರ್ವ ಜನಾಂಗದ ಪ್ರಗತಿಗೆ ಪ್ರಯತ್ನ ಮಾಡುತ್ತಿದ್ದೇನೆ. ಕ್ಷೇತ್ರದಲ್ಲಿ ಕುಡಿ ಯುವ ನೀರು, ರಸ್ತೆ, ಆರೋಗ್ಯ, ಶಿಕ್ಷಣ ಸೇರಿ ಹಲವು ಮೂಲಸೌಕರ್ಯ ಕಲ್ಪಿಸಲಾಗಿದೆ. ಜೊತೆಗೆ ಬಹುತೇಕ ಸಮುದಾಯಗಳಿಗೆ ಸುಸಜ್ಜಿತ ಭವನ ಕಟ್ಟಿಸಿದ್ದು ಸರ್ವರಿಗೂ ಸಮಪಾಲು, ಸಮಬಾಳು ಎನ್ನುವ ತತ್ವ ಪಾಲಿಸುತ್ತಿದ್ದೇನೆಂದು ಹೇಳಿದರು.

ಮಾಜಿ ಸಂಸದರಾದ ಎ.ನಾರಾಯಣಸ್ವಾಮಿ, ಚಂದ್ರಪ್ಪ ಮಾತನಾಡಿದರು. ಸುಕ್ಷೇತ್ರ ಹಾರನಹಳ್ಳಿ ಕೋಡಿಮಠದ ಡಾ.ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ವತ್ಸಲಾ ಶೇಖರಪ್ಪ, ಮುಂತಾದವರಿದ್ದರು.

### ವಿವೇಕ, ವಿಧೇಯತೆ ಬೆಳೆಸಿಕೊಳ್ಳಲು ಸಲಹೆ

ಹಿರಿಯೂರು ಕೋಡಿಹಳ್ಳಿ ಬೃಹನ್ಮಠದ ಶ್ರೀ ಷಡಕ್ಷರಿ ಸ್ವಾಮೀಜಿ ಮಾತನಾಡಿ, ಅಧಿಕಾರ ಇದ್ದರೆ ಮಾತ್ರ ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ಸಾಧ್ಯ. ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಬೇಕು. ಅತಿಯಾದ ಮೊಬೈಲ್ ಬಳಕೆಯಿಂದ ಹೊರಬರಬೇಕು. ಮೊಬೈಲ್ ಕೊಡಿಸಲಿಲ್ಲವೆಂಬ ಕಾರಣಕ್ಕೆ ಮಹಾರಾಷ್ಟ್ರದಲ್ಲಿ ಯುವಕನೊಬ್ಬ ತಾನು ಮಾತ್ರ ಬೆಟ್ಟದ ಮೇಲಿಂದ ಹಾರದೆ ತಂದೆ-ತಾಯಿಯ ಪ್ರಾಣಕ್ಕೂ ಕುತ್ತು ತಂದಿರುವ ಕಹಿ ನೆನಪು ನಮ್ಮ ಮುಂದಿದೆ ಎಂದರು.

ದೇಶ ಸ್ವಾತಂತ್ರ್ಯ ಗಳಿಸಿ 80 ವರ್ಷವಾದರೂ ಇನ್ನು ನಾವು ಶೋಷಣೆ ಅನುಭವಿಸುತ್ತಿದ್ದೇವೆ. ನಮ್ಮ ಭವಿಷ್ಯ ಉಜ್ವಲವಾಗಬೇಕೆಂದರೆ ಜ್ಞಾನ ಮುಖ್ಯ. ವಿಧೇಯತೆ, ವಿವೇಕ ಇದ್ದವರು ಶ್ರೇಷ್ಠ ವ್ಯಕ್ತಿಯಾಗಿ ಬೆಳೆಯುತ್ತಾರೆ. ಆದ್ದರಿಂದ ಸರ್ಕಾರದ ಯೋಜನೆಗಳ ಸದುಪಯೋಗ ಪಡೆದು ಸತ್ಪ್ರಜೆಯಾಗಿ ಬೆಳೆಯಬೇಕೆಂದು ಕಿವಿಮಾತು ಹೇಳಿದರು.

# ಗಣೇಶ ಮೂರ್ತಿ ಖರೀದಿ ಭರಾಟೆ

### ಬೆಲೆ ಏರಿಕೆ ನಡುವೆಯೂ ಕಳೆಗಟ್ಟಿದ ಸಂಭ್ರಮ | ಇಂದು ಮೋದಕ ಪ್ರಿಯನ ಪ್ರತಿಷ್ಠಾಪನೆ

• ಪ್ರಜೋದಯ ವರದಿ

**ಹಾಸನ:** ಬ್ರಹ್ಮ, ವಿಷ್ಣು ಸೇರಿ ಎಲ್ಲಾ ಗ್ರಹಗಳು, ಗಣಗಳಿಗೂ ನಾಯಕನೆಂದು ಪೂಜಿಸಲ್ಪಡುವ ವಿಘ್ನ ನಿವಾರಕ ಗಣೇಶೋತ್ಸವಕ್ಕೆ ಜಿಲ್ಲಾದ್ಯಂತ ಸಿದ್ಧತೆ ನಡೆದಿದೆ.

ಬರಗಾಲದ ನಡುವೆಯೂ ಮೋದಕ ಪ್ರಿಯ ಗಣೇಶ ಮೂರ್ತಿಗಳ ಖರೀದಿಗೆ ಸಾರ್ವಜನಿಕರು ಮುಗಿಬಿದ್ದರು. ನಗರದ ಮಹಾವೀರ ವೃತ್ತ ಹಾಗು ಹೊಸ ಬಸ್ ನಿಲ್ದಾಣ ಮುಂಭಾಗದ ಮಳಿಗೆಯಲ್ಲಿ ಗಣೇಶ ಮೂರ್ತಿಗಳ ಮಾರಾಟ ಭರಾಟೆ ಜೋರಾಗಿ ನಡೆಯಿತು. ಪ್ರತಿ ವರ್ಷದಂತೆ ಈ ವರ್ಷವೂ ವ್ಯಾಪಾರಿಗಳು ಶೆಡ್ ನಿರ್ಮಿಸಿಕೊಂಡು ಕಳೆದ ಒಂದು ವಾರದಿಂದ ಗೌರಿ ಗಣೇಶ ಮೂರ್ತಿಗಳ ಮಾರಾಟ ಮಾಡುತ್ತಿದ್ದಾರೆ. ಸುಮಾರು 8 ರಿಂದ 12 ಅಡಿ ಎತ್ತರದವರೆಗೆ ಗಣೇಶ ಮೂರ್ತಿಗಳಿದ್ದು, ಗ್ರಾಮೀಣ ಭಾಗದ ಜನರು ಖರೀದಿಯಲ್ಲಿ ತೊಡಗಿದರು. ಸೋಮವಾರ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಎಲ್ಲಾ ಕಡೆ ಸಿದ್ಧತೆ ನಡೆದಿದೆ. ನಗರದ ಪ್ರಮುಖ ರಸ್ತೆಗಳು ಕೇಸರಿ ಬಾವುಟಗಳಿಂದ ರಾರಾಜಿಸುತ್ತಿವೆ. ಪ್ರಮುಖ ರಸ್ತೆಗಳಲ್ಲಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಕಟ್ಟಿದ್ದು, ಶಾಂತಿಯುತ ಹಾಗು ಅರ್ಥಪೂರ್ಣ ಗಣೇಶೋತ್ಸವಕ್ಕೆ ವಿವಿಧ ಸಂಘಟನೆಗಳು ತಯಾರಿ ಮಾಡಿಕೊಂಡಿವೆ.



**ಪರಿಸರ ಸ್ನೇಹಿ ಗಣೇಶನಿಗೆ ಒತ್ತು**

ಪರಿಸರಕ್ಕೆ ಮಾರಕವಾಗಿರುವ ಪಿಒಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್) ಗಣೇಶ ಮೂರ್ತಿಗಳ ಮಾರಾಟ ಮಾಡದಂತೆ ಮಹಾನಗರ ಪಾಲಿಕೆ ಎಲ್ಲಾ ವರ್ತಕರಿಗೆ ಮೊದಲೇ ತಿಳಿಸಿದ್ದರಿಂದ ಯಾರೂ ಪಿಒಪಿ ಗಣೇಶ ಮೂರ್ತಿ ತಂದಿಲ್ಲ. ಮಾರುಕಟ್ಟೆಯಲ್ಲಿ ಮಣ್ಣಿನಿಂದ ಹಾಗು ಅನುಪಯುಕ್ತ ಕಾಗದ ಬಳಸಿ ನಿರ್ಮಾಣವಾದ ಗಣೇಶ ಮೂರ್ತಿಗಳನ್ನೇ ಇಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸುವ ಭಾರೀ ಗಾತ್ರದ ಮೂರ್ತಿಗಳು ಪ್ಲಾಸ್ಟರ್ ಆಫ್ ಪ್ಯಾರಿಸ್ ಆಗಿದ್ದು ಅದಕ್ಕೆ ಪಾಲಿಕೆ ಕಡಿವಾಣ ಹಾಕಿಲ್ಲವೆಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

» ನಾಲ್ಕನೇ ಪುಟದಲ್ಲಿ

## ಬಾಲ ಮಂದಿರಗಳಿಗೂ ಪುಸ್ತಕ ತಲುಪಲಿ: ರೂಪ ಹಾಸನ



• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಶಾಲಾ ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಪುಸ್ತಕ ವಿತರಣೆ ಅಭಿಯಾನ ಬಾಲ ಮಂದಿರಕ್ಕೂ ವಿಸ್ತರಣೆಯಾಗಲಿ ಎಂದು ಸಾಹಿತಿ ರೂಪ ಹಾಸನ ಅವರು ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕರ್ನಾಟಕ ಕನ್ನಡ ಬರಹಗಾರರ ಹಾಗು ಪ್ರಕಾಶಕರ ಸಂಘದಿಂದ ಏರ್ಪಡಿಸಿದ್ದ ನೂರು ಶಾಲೆಗೆ-ನೂರು ನೂರು ಪುಸ್ತಕ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರಿ ಶಾಲೆಯ ಮಕ್ಕಳಿಗೆ ಪುಸ್ತಕಗಳನ್ನು ಕೊಡುವ ಜೊತೆಗೆ ಪ್ರತಿ ಜಿಲ್ಲೆಯ ಬಾಲಮಂದಿರಗಳಿಗೂ ಸಹ ಪುಸ್ತಕಗಳನ್ನು ನೀಡುವ ಕೆಲಸವಾಗಲಿ. ದೌರ್ಜನ್ಯಕ್ಕೆ ಒಳಗಾದ ಮಕ್ಕಳ ಪಾಲಿಗೂ ಈ ಪುಸ್ತಕಗಳು ತಲುಪಬೇಕು. ಈ ರೀತಿಯ ಮಾದರಿ ಕೆಲಸಗಳನ್ನು ಕನ್ನಡ ಸಾಹಿತ್ಯ ಪರಿಷತ್ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿ ಸಂಘ ಸಂಸ್ಥೆಗಳು ಮಾಡಬೇಕಿದೆ ಎಂದರು.

ಕರ್ನಾಟಕ ಕನ್ನಡ ಬರಹಗಾರರ ಹಾಗು ಪ್ರಕಾಶಕರ ಸಂಘದ ಅಧ್ಯಕ್ಷ

» ನಾಲ್ಕನೇ ಪುಟದಲ್ಲಿ

# ಅನುಗ್ರಹಕ್ಕೆ ಬಾರದ ಅನುದಾನ: ಸಂಕಷ್ಟದಲ್ಲಿ ರಾಸು ಮಾಲೀಕರು

-ಮಲ್ಲಿಕಾರ್ಜುನ ಕೊಚ್ಚರಗಿ

### ಗ್ರಾಮೀಣ ಜನರಿಗೆ ಹೆಚ್ಚಿದ ಆರ್ಥಿಕ ಹೊರೆ | ರಾಜ್ಯ ಸರ್ಕಾರದ ನಡೆಗೆ ಬೇಸರ

• ಪ್ರಜೋದಯ ವರದಿ

**ಹಾಸನ:** ಜಾನುವಾರುಗಳ ಆಕಸ್ಮಿಕ ಸಾವಿನಿಂದ ನಷ್ಟಕ್ಕೀಡಾಗುವ ರೈತರಿಗೆ ಆರ್ಥಿಕ ಪರಿಹಾರ ನೀಡುವ ಉದ್ದೇಶದಿಂದ ಜಾರಿಗೊಳಿಸಿದ ಅನುಗ್ರಹ ಯೋಜನೆಗೆ ಕಳೆದ ಒಂದು ವರ್ಷದಿಂದ ಹಣ ಬಿಡುಗಡೆಯಾಗದೆ ಗ್ರಹಣ ಹಿಡಿದಿದೆ.

2013ರಲ್ಲಿ ಸಿದ್ದರಾಮಯ್ಯ ಸರ್ಕಾರ ಇದ್ದಾಗ ಮೊದಲ ಬಾರಿಗೆ ಅನುಗ್ರಹ ಯೋಜನೆ ಜಾರಿಗೊಳಿಸಲಾಯಿತು. 2018ರ ಬಳಿಕ ಬೇರೆ ಸರ್ಕಾರ ಬಂದಾಗ ಯೋಜನೆ ಸ್ಥಗಿತಗೊಂಡಿತು. ನಂತರ ಮತ್ತೆ ಪ್ರಾರಂಭವಾಗಿ ನಿಗದಿತ ಅವಧಿಯಲ್ಲಿ ಹಣ ದೊರೆಯುತ್ತಿತ್ತು. ಕಳೆದ ಒಂದು ವರ್ಷದಿಂದ 3.36 ಕೋಟಿ ರೂ. ಬಿಡುಗಡೆ ಆಗಿಲ್ಲ. ಪಶು ಸಂಗೋಪನಾ ಇಲಾಖೆ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ ಕುರಿ ಮೇಕೆ ಆಕಸ್ಮಿಕವಾಗಿ ಸತ್ತರೆ 7 ಸಾವಿರ ರೂ., ಗೋವು-ಎಮ್ಮೆ ಸತ್ತರೆ 15 ಸಾವಿರ ರೂ. ನೀಡಲಾಗುತ್ತದೆ. ಆದರೆ, 2025ರ ಮೇ ಬಳಿಕ ರಾಜ್ಯ ಸರ್ಕಾರದರಿಂದ ಅನುದಾನ ಬಾರದೆ ರೈತರಿಗೆ



ಆರ್ಥಿಕ ಅನುಗ್ರಹ ಇಲ್ಲದಂತಾಗಿದೆ. ಹೀಗಾಗಿ ಅರ್ಜಿ ಸಲ್ಲಿಸಿದವರು ಹಣಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಪಶುಪಾಲನಾ ಇಲಾಖೆಯಿಂದ ಸರ್ಕಾರಕ್ಕೆ ಪದೇ ಪದೇ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆಯಾದರೂ ಅನುದಾನ ಬಿಡುಗೆಯಾಗುವ ಭರವಸೆ ಮಾತ್ರ ಇಲ್ಲವಾಗಿದೆ.

2024-25ನೇ ಸಾಲಿನಲ್ಲಿ 1663 ಕುರಿ-ಮೇಕೆ ಮೃತಪಟ್ಟು 84.60 ಲ.ರೂ. ಬಿಡುಗಡೆಯಾಗಿತ್ತು. 2025-26ನೇ ಸಾಲಿನಲ್ಲಿ 1167 ಪ್ರಾಣಿಗಳು ಮೃತಪಟ್ಟಿದ್ದು, 82.82 ಲ.ರೂ. ಸಿಕ್ಕಿತ್ತು. 2026-27ನೇ ವರ್ಷದಲ್ಲಿ ಈ ವರೆಗೆ 2255 ಕುರಿ ಹಾಗು ಮೇಕೆಗಳು ಮೃತಪಟ್ಟಿದ್ದು 1.43 ಕೋ.ರೂ. ಬರಬೇಕಿದೆ. ಅದೇ ರೀತಿ 2025-26ರಲ್ಲಿ 1619 ಹಸು ಮತ್ತು ಎಮ್ಮೆಗಳು ಮೃತಪಟ್ಟಿದ್ದು 319 ಜಾನುವಾರುಗಳಿಗೆ ಮಾತ್ರ 47 ಲ.ರೂ. ಪರಿಹಾರ ಬಿಡುಗಡೆ ಆಗಿದೆ. ಉಳಿದ ರಾಸುಗಳ ಮಾಲೀಕರಿಗೆ ಹಣ ನೀಡಲು ಸಾಧ್ಯವಾಗಿಲ್ಲ. ಸರ್ಕಾರದಿಂದ ಇನ್ನು 1.93 ಕೋ.ರೂ. ಎಮ್ಮೆ ಮತ್ತು ಹಸುವಿಗೆ ಹಾಗು 1.43 ಕೋ.ರೂ. ಕುರಿ-ಮೇಕೆಗೆ ಸೇರಿ 3.36 ಕೋ.ರೂ. ಸಿಗಬೇಕಿದೆ.

### ವರ್ಷಕ್ಕೆ 65 ಸಾವಿರ ಕರುಗಳ ಜನನ

ಹಾಸನ ಜಿಲ್ಲೆಯಲ್ಲಿ 5.50 ಲಕ್ಷ ಜಾನುವಾರುಗಳಿದ್ದು, ಹೈನುಗಾರಿಕೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದೆ. ಅದೇ ರೀತಿ ಕರುಗಳ ಜನನ ಪ್ರಮಾಣದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಈ ವರ್ಷ 3.35 ಲಕ್ಷ ಕೃತಕ ಗರ್ಭಧಾರಣೆ ನಡೆಸಿದ್ದು, 1.50 ಲಕ್ಷ ಹಸುಗಳಿಗೆ ಫಲ ಕಟ್ಟಿದೆ. ಹೀಗಾಗಿ 65 ಸಾವಿರ ಕರುಗಳು ಜನಿಸುವ ಮೂಲಕ ಸಾಧನೆ ಬರೆದಿದೆ. ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರುವ ಕಾಲುಬಾಯಿ ಲಸಿಕೆ ವಿಧಾನ, ರಾಸುಗಳ ಸಾಕಣೆ ವಿಧಾನವನ್ನು ತಿಳಿಯಲು ದೆಹಲಿ ಮತ್ತಿತರ ಕಡೆಯಿಂದ ತಜ್ಞರು ಇತ್ತೀಚೆಗೆ ಭೇಟಿ ನೀಡಿದ್ದರು.

**ಅನಿರೀಕ್ಷಿತ ಸಾವು ಹೆಚ್ಚು**

ಜಿಲ್ಲೆಯಲ್ಲಿ ಜಾನುವಾರುಗಳ ಸಾವು ಅನಿರೀಕ್ಷಿತವಾಗಿ ಹೆಚ್ಚುತ್ತಲೇ ಇದೆ. ಮಲೆನಾಡು ಭಾಗದಲ್ಲಿ ರಾಸಗಳು ಸಾವನ್ನಪ್ಪುತ್ತಿವೆ. ಕಾಡಂಚಿನ ಪ್ರದೇಶಗಳಲ್ಲಿ ವಿಷಪೂರಿತ ಹುಲ್ಲು ತಿಂದು ಸಮಸ್ಯೆಗೆ ಸಿಲುಕಿತ್ತಿವೆ. ಇನ್ನು ಅನಾರೋಗ್ಯ ಕಾರಣದಿಂದಲೂ ಸಾವಿಗೀಡಾಗುತ್ತಿವೆ.

**ಗ್ಯಾರಂಟಿ ಯೋಜನೆ ಕಾರಣ**

ಅನುಗ್ರಹ ಯೋಜನೆಯಡಿ ಜಾನುವಾರು ಮಾಲೀಕರಿಗೆ ಹಣ ದೊರೆಯದೆ ಇರಲು ಗ್ಯಾರಂಟಿ ಯೋಜನೆಗಳು ಕಾರಣ ಎನ್ನಲಾಗಿದೆ. ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮಿ, ಸ್ತ್ರೀ ಶಕ್ತಿ, ಯುವ ನಿಧಿ, ಗೃಹ ಜ್ಯೋತಿ ಯೋಜನೆಗೆ ಹಣ ಹೊಂದಿಸಲು ಪರದಾಡುತ್ತಿವೆ. ಹೀಗಾಗಿ ಇಂತಹ ಮಹತ್ವದ ಯೋಜನೆಗೆ ಹಣ ಲಭ್ಯವಾಗುತ್ತಿಲ್ಲ. ಹೈನುಗಾರಿಕೆಯನ್ನೇ ನಂಬಿ ರಾಸುಗಳನ್ನು ಸಾಕಿರುವ ಗ್ರಾಮೀಣ ಭಾಗದ ರೈತರು ಸರ್ಕಾರ ಅಸಡ್ಡೆಯಿಂದ ತೊಂದರೆಗೆ ಸಿಲುಕಿದ್ದಾರೆ. ಅಂದಾಜು 50 ರಿಂದ 60 ಸಾವಿರ ರೂ. ಮೌಲ್ಯದ ಹಸು ಸತ್ತರೆ ಕನಿಷ್ಠ 15 ಸಾವಿರ ರೂ.ಗಳಾದರೂ ಪರಿಹಾರ ಸಿಗುತ್ತದೆಂಬ ನಿರೀಕ್ಷೆ ಹುಸಿಯಾಗುತ್ತಿದೆ. ಹೀಗಾಗಿ ರೈತರಿಗೆ ಆರ್ಥಿಕ ಬಿಕ್ಕಟ್ಟು ಹೆಚ್ಚುತ್ತಿದೆ.

> ಅನುಗ್ರಹ ಯೋಜನೆಗೆ 3.36 ಕೋ. ರೂ. ಬಿಡುಗಡೆ ಆಗಬೇಕು. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣ ದೊರೆತ ತಕ್ಷಣವೇ ತಾಲ್ಲೂಕುವಾರು ಬಿಡುಗಡೆ ಮಾಡಲಾಗುವುದು.
> -ಡಾ|| ಬಿ.ಕೆ.ರಮೇಶ್, ಪಶುಪಾಲನಾ ಇಲಾಖೆ ಉಪನಿರ್ದೇಶಕ

# ಗ್ರಾಮೀಣ ಆರೋಗ್ಯ ಸೇವೆಗೆ ಹೆಚ್ಚಿನ ಅನುದಾನ ನೀಡಿ

• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ಗ್ರಾಮೀಣ ಪ್ರದೇಶದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ದೊರೆಯುವಂತೆ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಆರೋಗ್ಯ ಇಲಾಖೆಗೆ ಹೆಚ್ಚಿನ ಅನುದಾನ ಒದಗಿಸಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮನವಿ ಮಾಡಿದರು.

ಹೋಬಳಿಯ ದ್ಯಾವನೂರು ಗ್ರಾಮದಲ್ಲಿ ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆಯಡಿ ಆರೋಗ್ಯ ಇಲಾಖೆಯ ಆಯುಷ್ಮಾನ್ ಸ್ವಾಸ್ಥ್ಯ ಯೋಜನೆಯ ಮೂಲಕ ಸುಮಾರು 65 ಲ.ರೂ. ವೆಚ್ಚದಲ್ಲಿ



ನೂತನ ಆರೋಗ್ಯ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಚನ್ನರಾಯಪಟ್ಟಣ ತಾಲ್ಲೂಕು ತೀವ್ರ ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರ್ಪಡೆಯಾಗಿದ್ದು, ಸರ್ಕಾರದ ಮಾರ್ಗಸೂಚಿಯನ್ವಯ ರೈತರಿಗೆ ಅಗತ್ಯ ಪರಿಹಾರ ದೊರೆಯಲಿದೆ. ತಾಲ್ಲೂಕಿಗೆ ಬೇಡಿಕೆಯಷ್ಟು ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಅದರಲ್ಲೂ ಸಂಜೆ ವೇಳೆ ಹೆಚ್ಚಿನ ಪ್ರಮಾಣದಲ್ಲಿ ಲೋಡ್ ಶೆಡ್ಡಿಂಗ್ ಮಾಡುತ್ತಿರುವುದರಿಂದ ಗ್ರಾಮೀಣ ಪ್ರದೇಶದ ಜನರು ಹಾಗು ರೈತರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗುವುದೆಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಹೆಚ್.ಶಿವಣ್ಣ ಮಾತನಾಡಿದರು. ಎಪಿಎಂಸಿ ಮಾಜಿ ಅಧ್ಯಕ್ಷ ವಿ.ಎನ್.ಮಂಜುನಾಥ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಓಬಳಾಪುರ ಬಸವರಾಜ್, ಟಿಎಪಿಎಂಎಸ್ ಮಾಜಿ ನಿರ್ದೇಶಕ ಬಾಗೂರು ಮನು, ಲ್ಯಾಂಡ್ ಆರ್ಮಿ ಇಂಜಿನಿಯರ್ ಪ್ರೀತಮ್ ಇತರರಿದ್ದರು.

# ಗಣೇಶ ವಿಸರ್ಜನೆ ಮೆರವಣಿಗೆಗೆ ಆಕ್ಷೇಪ: ಬಿಜೆಪಿ ಪ್ರತಿಭಟನೆ

• ಪ್ರಜೋದಯ ವರದಿ

**ಮೈಸೂರು:** ಮಸೀದಿ ರಸ್ತೆಯಲ್ಲಿ ಗಣೇಶೋತ್ಸವ ಮೆರವಣಿಗೆ ನಡೆಸದಂತೆ ತಾಕೀತು ಮಾಡಿರುವ ಟಿ.ನರಸೀಪುರ ಟೌನ್ ಠಾಣೆ ಇನ್‌ಸ್ಪೆಕ್ಟರ್ ಧನಂಜಯ್ ಅವರನ್ನು ಸೇವೆಯಿಂದ ಅಮಾನತು ಮಾಡಬೇಕೆಂದು ಆಗ್ರಹಿಸಿ ವಿಪಕ್ಷ ನಾಯಕ ಆರ್.ಅಶೋಕ್ ಅವರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದರು.

ಈಚೆಗೆ ನಡೆದ ಗಣೇಶೋತ್ಸವ ಆಚರಣೆ ಪೂರ್ವಭಾವಿ ಸಭೆಯಲ್ಲಿ ಇನ್‌ಸ್ಪೆಕ್ಟರ್ ಧನಂಜಯ್ ಅವರು, ಗಣೇಶೋತ್ಸವ ಸಮಿತಿಯ ಯುವಕರಿಗೆ ಶಾಂತಿ ಕಾಪಾಡುವ ವಿಚಾರದಲ್ಲಿ



ಎಚ್ಚರಿಕೆ ನೀಡಿದ್ದರು. ಅದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಪೊಲೀಸರ ನಡೆಗೆ ಆಕ್ಷೇಪ ವ್ಯಕ್ತಪಡಿಸಿ ಬಿಜೆಪಿ ನಾಯಕರು ಪಟ್ಟಣಕ್ಕೆ ಧಾವಿಸಿದ್ದು, ಗಣೇಶ ಮೂರ್ತಿ ಹಿಡಿದು ಧರಣಿ ಕುಳಿತರು. ಗಣೇಶೋತ್ಸವ ಮೆರವಣಿಗೆಯು ಈ ಹಿಂದಿನ ಮಾರ್ಗದಲ್ಲೇ ಎಂದಿನಂತೆ ನಡೆಯಲು ಪೊಲೀಸರು ಅವಕಾಶ ನೀಡಬೇಕು. ಧನಂಜಯ್ ಅವರನ್ನು ಅಮಾನತು ಇಲ್ಲವೇ ಬೇರೆಡೆಗೆ ವರ್ಗಾವಣೆ ಮಾಡಬೇಕೆಂದು ಆರ್.ಅಶೋಕ್ ಅವರು ಒತ್ತಾಯಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಬಿಜೆಪಿ ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಗಣೇಶೋತ್ಸವ ಮೆರವಣಿಗೆಯು ಹಿಂದಿನಂತೆ ಅದೇ ಮಾರ್ಗದಲ್ಲಿ ನಡೆಯಲು ಅವಕಾಶವಿದೆ. ಧನಂಜಯ್ ವಿಚಾರದಲ್ಲಿ ಸರ್ಕಾರದ ಗಮನಕ್ಕೆ ತಂದು ಕ್ರಮ ಕೈಗೊಳ್ಳುತ್ತೇವೆಂದರು. ಅದಕ್ಕೆ ಒಪ್ಪದ ಪ್ರತಿಭಟನಾಕಾರರು ಅಹೋರಾತ್ರಿ ಧರಣಿ ನಡೆಸುವುದಾಗಿ ಹೇಳಿದರು.

ಸಂಜೆ 5 ಗಂಟೆವರೆಗೂ ಧರಣಿ ಮುಂದುವರಿದಿದ್ದು, ನಂತರದಲ್ಲಿ ಬಿಜೆಪಿ ನಾಯಕರು ಪ್ರತಿಭಟನಾ ಮೆರವಣಿಗೆ ಹೊರಟಾಗ ಪೊಲೀಸರು ಅವರನ್ನು ವಶಕ್ಕೆ ಪಡೆದರು. ಮೈಸೂರು- ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಪತ್ರಕರ್ತ ಸೇತುರಾಮ್ ಆರೋಗ್ಯ ವಿಚಾರಿಸಿದ ಸಚಿವ ಶಿವಲಿಂಗೇಗೌಡ



• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಬಿ.ಎಸ್.ಸೇತುರಾಮ್ ಅವರ ನಿವಾಸಕ್ಕೆ ಸಚಿವ ಕೆ.ಎಂ.ಶಿವಲಿಂಗೇಗೌಡ ಭಾನುವಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಸಚಿವ ಶಿವಲಿಂಗೇಗೌಡ ಅವರು ಮಾತನಾಡಿ, ಹಲವು ವರ್ಷಗಳಿಂದ ಪತ್ರಿಕೋದ್ಯಮದ ಮೂಲಕ ಅರಸೀಕೆರೆ ತಾಲ್ಲೂಕಿನ ಆಗುಹೋಗುಗಳನ್ನು ಜನರಿಗೆ ತಲುಪಿಸುವಲ್ಲಿ ಸೇತುರಾಮ್ ಅವರ ಕೊಡುಗೆ ಮಹತ್ವದ್ದಾಗಿದೆಯೆಂದು ಹೇಳಿದರು.

ಅರಸೀಕೆರೆ ತಾಲ್ಲೂಕಿನ ಅಭಿವೃದ್ಧಿ ವಿಚಾರಗಳನ್ನು ಜನಪ್ರತಿನಿಧಿಗಳು ಹಾಗು ಸರ್ಕಾರದ ಗಮನಕ್ಕೆ ತರುವಲ್ಲಿ ಪತ್ರಕರ್ತರ ಪಾತ್ರ ಪ್ರಮುಖವಾಗಿದೆ. ಸಮಾಜದ ಸಮಸ್ಯೆಗಳಿಗೆ ಧ್ವನಿಯಾಗಿ ಜನಪರ ವಿಚಾರಗಳನ್ನು ಮುನ್ನೆಲೆಗೆ ತರುವ ಪತ್ರಕರ್ತರ ಸೇವೆ ಶ್ಲಾಘನೀಯ ಎಂದು ಸಚಿವ ಶಿವಲಿಂಗೇಗೌಡ ಅಭಿಪ್ರಾಯಪಟ್ಟರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜಿ.ಬಿ.ಶಶಿಧರ್ ಮತ್ತಿತರರಿದ್ದರು.

# ಬುಧವಾರದೊಳಗೆ ನೀರು ಹರಿಸದಿದ್ದರೆ ಅಣೆಕಟ್ಟೆಗೆ ಮುತ್ತಿಗೆ

• ಪ್ರಜೋದಯ ವರದಿ

**ಆಲೂರು:** ಮಳೆ ಕೊರತೆಯಿಂದ ಪಾಳ್ಯ ಹೋಬಳಿ ವ್ಯಾಪ್ತಿಯ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ವಾಟೆಹೊಳೆ ಜಲಾಶಯದಿಂದ ಬುಧವಾರದೊಳಗೆ ನೀರು ಬಿಡುಗಡೆ ಮಾಡಬೇಕು. ಇಲ್ಲವಾದರೆ ರೈತರೊಂದಿಗೆ ಜಲಾಶಯಕ್ಕೆ ಮುತ್ತಿಗೆ ಹಾಕಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಪಾಳ್ಯ ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆದ ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿ, ಮಳೆ ಕೈಕೊಟ್ಟಿರುವುದರಿಂದ ವ್ಯಾಪ್ತಿಯ ರೈತರು ಬೆಳೆಗಳಿಗೆ ನೀರಿಲ್ಲದೆ ಸಂಕಷ್ಟ ಎದುರಿಸುತ್ತಿದ್ದಾರೆ. ವಾಟೆಹೊಳೆ ಜಲಾಶಯದಿಂದ ನೀರು ಹರಿಸುವಂತೆ ಸರ್ಕಾರ ಹಾಗು ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ರೈತರ ಹಿತದೃಷ್ಟಿಯಿಂದ ಬುಧವಾರದೊಳಗೆ ನೀರು ಬಿಡುಗಡೆ ಮಾಡಬೇಕು. ನೀರು ಹರಿಸದಿದ್ದರೆ ಜಲಾಶಯಕ್ಕೆ ಮುತ್ತಿಗೆ ಹಾಕುತ್ತೇನೆಂದು ಎಚ್ಚರಿಸಿದರು.

**ಪಿಡಿಒ ವರ್ಗಾವಣೆಗೆ ಸೂಚನೆ**

ಸಭೆಯಲ್ಲಿ ಪಾಳ್ಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಗ್ರಾಮಸ್ಥರು ಗಂಭೀರ ಆರೋಪಗಳನ್ನು ಮಾಡಿದರು. ಕುಡಿಯುವ





ನೀರು, ರಸ್ತೆ, ಚರಂಡಿ ಸೇರಿ ಅಗತ್ಯ ಸೌಕರ್ಯ ಕಲ್ಪಿಸುವಲ್ಲಿ ವಿಫಲರಾಗಿದ್ದಾರೆ. ಸಾರ್ವಜನಿಕರು ತಮ್ಮ ಕೆಲಸಕ್ಕಾಗಿ ಗ್ರಾಮ ಪಂಚಾಯಿತಿಗೆ ತೆರಳಿದಾಗ ಉಡಾಫೆ ಹಾಗು ಅಸಹಕಾರದ ವರ್ತನೆ ತೋರುತ್ತಿದ್ದಾರೆಂದು ಶಾಸಕರ ಗಮನಕ್ಕೆ ತಂದರು.

ಸಿಮೆಂಟ್ ಮಂಜು ಅವರು ಕೂಡಲೇ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ದೂರವಾಣಿ ಕರೆ ಮಾಡಿ, ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸದ ಅಧಿಕಾರಿಯನ್ನು ಮುಂದುವರಿಸುವುದು ಸೂಕ್ತವಲ್ಲ. ಅವರನ್ನು ಕೂಡಲೇ ವರ್ಗಾವಣೆ ಮಾಡುವಂತೆ ಸೂಚಿಸಿದರು.

ಸಭೆಯಲ್ಲಿ ಬಹುತೇಕ ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದವು. ಈ ಹಿನ್ನಲೆಯಲ್ಲಿ ಕಂದಾಯ ನಿರೀಕ್ಷಕರು ಹಾಗು ಗ್ರಾಮ ಆಡಳಿತ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ ಶಾಸಕರು, ರೈತರು ಮತ್ತು ಬಡವರು ಸಣ್ಣಪುಟ್ಟ ಕೆಲಸಗಳಿಗಾಗಿ ಪದೇಪದೆ ಸರ್ಕಾರಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದರು.

ಸಾರ್ವಜನಿಕರ ಕೆಲಸವನ್ನು ವಿನಾಕಾರಣ ವಿಳಂಬ ಮಾಡಬೇಡಿ. ನಿಯಮಾನುಸಾರ ಆಗಬೇಕಾದ ಕೆಲಸವನ್ನು ನಿಗದಿತ ಸಮಯದೊಳಗೆ ಮಾಡಿಕೊಡಿ. ರೈತರು ಮತ್ತು ಬಡವರನ್ನು ಕಚೇರಿಗಳಿಗೆ ಅಲೆದಾಡಿಸುವ ಪ್ರವೃತ್ತಿ ಸಹಿಸುವುದಿಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸುವ ಉದ್ದೇಶದಿಂದ ಆಯೋಜಿಸಿರುವ ಸಭೆಗೆ ಅಧಿಕಾರಿಗಳು ಗೈರಾಗುವುದು ಸರಿಯಲ್ಲ. ಗೈರಾದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ವಿವರಣೆ ಪಡೆಯುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಅವರು, ಸಾರ್ವಜನಿಕರು ಸಲ್ಲಿಸುವ ಅರ್ಜಿಗಳು ಕಡತಗಳಲ್ಲಿ ಉಳಿಯದೆ, ನಿಗದಿತ ಅವಧಿಯಲ್ಲಿ ವಿಲೇವಾರಿಯಾಗಬೇಕು. ರೈತರು, ಬಡವರು ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಅಧಿಕಾರಿಗಳು ಆದ್ಯತೆಯ ಮೇರೆಗೆ ಸ್ಪಂದಿಸಬೇಕೆಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಹುಲಿಮನಿ ತಿಮ್ಮಣ್ಣ, ತಹಶೀಲ್ದಾರ್ ಮಲ್ಲಿಕಾರ್ಜುನ್, ಡಿವೈಎಸ್ಪಿ ಮಾಲತೀಶ್, ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ, ಪೊಲೀಸ್ ವೃತ್ತ ನಿರೀಕ್ಷಕ ಮೋಹನ್ ರೆಡ್ಡಿ ಇತರರಿದ್ದರು.

## ಯಾರಿಗೂ ನಿರ್ಬಂಧ ಹೇರುವುದಿಲ್ಲ : ಡಿ.ಕೆ.ಶಿ.

• ಪ್ರಜೋದಯ ವರದಿ

**ಬೆಂಗಳೂರು:** ಗಣೇಶ ಬಿಜೆಪಿಯವರ ಆಸ್ತಿಯಲ್ಲ. ಗಣೇಶ ಹಬ್ಬದ ಆಚರಣೆಗೆ ಯಾವುದೇ ತಡೆ ಇಲ್ಲವೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಸಮಾಜದಲ್ಲಿ ಅಶಾಂತಿ ಮೂಡಿಸಲು ಕುತಂತ್ರಗಳು ನಡೆಯುತ್ತಿವೆ. ಬಿಜೆಪಿಯವರು ಸಮಾಜಘಾತುಕ ಶಕ್ತಿಗಳನ್ನು ಬಳಕೆ ಮಾಡುತ್ತಿದ್ದಾರೆ. ಎಚ್ಚರಿಕೆಯಿಂದ ಇರುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ ಎಂದರು.

ಗಣೇಶೋತ್ಸವ ಆಚರಣೆಗೆ ಸರ್ಕಾರ ಅನೇಕ ನಿರ್ಬಂಧ ಹೇರಿದೆ ಎಂಬ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅವರು ಈ ವಿಚಾರದಲ್ಲಿ ಕೋಮು ಪ್ರಚೋದನೆ ಮಾಡುತ್ತಿದ್ದಾರೆ. ಬಿಜೆಪಿಯವರು ಏನಾದರೂ ಮಾಡಲಿ. ಬಾಲಗಂಗಾಧರ ತಿಲಕರು ಆರಂಭಿಸಿದ ಆಚರಣೆ ನಡೆದು

» ನಾಲ್ಕನೇ ಪುಟದಲ್ಲಿ

C M Y K C M Y K C M Y K C M Y K

# ಭಾವ ಲಹರಿ

# ವಿಘ್ನ ನಿವಾರಕ ಗಣೇಶ : ಭಕ್ತಿ, ಜ್ಞಾನ, ಶುಭಾರಂಭದ ಸಂಕೇತ

**ವಕ್ರತುಂಡ ಮಹಾಕಾಯ, ಸೂರ್ಯಕೋಟಿ ಸಮಪ್ರಭ**
**ನಿರ್ವಿಘ್ನಂ ಕುರು ಮೇ ದೇವ, ಶುಭಕಾರ್ಯೇಷು ಸರ್ವದಾ.**

ವಿಘ್ನಗಳನ್ನು ದೂರ ಮಾಡಿ, ಜ್ಞಾನ ಮತ್ತು ವಿವೇಕದ ದಾರಿಯನ್ನು ತೋರಿಸುವ ಗಣೇಶನು ಎಲ್ಲರ ಬದುಕಿನಲ್ಲೂ ಸಂತೋಷ, ಶಾಂತಿ, ಸಮೃದ್ಧಿ ಮತ್ತು ಯಶಸ್ಸನ್ನು ತರಲಿ ಎಂಬುದೇ ಗಣೇಶ ಚತುರ್ಥಿಯ ಶುಭ ಸಂದೇಶ.

ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಗಣೇಶನಿಗೆ ವಿಶಿಷ್ಟವಾದ ಸ್ಥಾನವಿದೆ. ಯಾವುದೇ ಶುಭಕಾರ್ಯ ಆರಂಭಿಸುವ ಮುನ್ನ ಮೊದಲು ಗಣೇಶನನ್ನು ಸ್ಮರಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ವಿದ್ಯಾಭ್ಯಾಸವಾಗಲಿ, ಹೊಸ ಉದ್ಯಮ ಆರಂಭವಾಗಲಿ, ಮದುವೆ, ಗೃಹಪ್ರವೇಶವಾಗಲಿ ಅಥವಾ ಯಾವುದೇ ಮಹತ್ವದ ಕಾರ್ಯವಾಗಲಿ, ಶ್ರೀ ಗಣೇಶಾಯ ನಮಃ ಎಂದು ಪ್ರಾರಂಭಿಸುವ ಮೂಲಕ ಕಾರ್ಯ ನಿರ್ವಿಘ್ನವಾಗಿ ನೆರವೇರಲಿ ಎಂಬ ಆಶಯವನ್ನು ವ್ಯಕ್ತಪಡಿಸಲಾಗುತ್ತದೆ. ಹೀಗಾಗಿ ಗಣೇಶನು ಕೇವಲ ದೇವತೆಯಾಗಿ ಮಾತ್ರವಲ್ಲದೆ, ಶುಭಾರಂಭ, ಜ್ಞಾನ, ವಿವೇಕ, ಬುದ್ಧಿವಂತಿಕೆ ಮತ್ತು ವಿಘ್ನ ನಿವಾರಣೆಯ ಸಂಕೇತವಾಗಿ ಭಾರತೀಯರ ಮನಸ್ಸಿನಲ್ಲಿ ನೆಲೆಗೊಂಡಿದ್ದಾನೆ.

ಗಣೇಶನನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಗಣಪತಿ, ವಿನಾಯಕ, ವಿಘ್ನೇಶ್ವರ, ವಿಘ್ನರಾಜ, ಏಕದಂತ, ಗಜಾನನ, ಲಂಬೋದರ, ಸಿದ್ಧಿವಿನಾಯಕ, ಗಣನಾಯಕ ಮುಂತಾದ ಹೆಸರುಗಳು ಆತನ ವಿವಿಧ ಗುಣಗಳನ್ನು ಪ್ರತಿಬಿಂಬಿಸುತ್ತವೆ. ಗಣಗಳ ನಾಯಕ ಎಂಬ ಅರ್ಥವನ್ನು ಹೊಂದಿರುವ ಗಣಪತಿ ಎಂಬ ಹೆಸರು ಆತನ ಮಹತ್ವವನ್ನು ಸಾರುತ್ತದೆ. ಯಾವುದೇ ಕಾರ್ಯಕ್ಕೆ ಅಡ್ಡಿಯಾಗುವ ವಿಘ್ನಗಳನ್ನು ದೂರ ಮಾಡಿ, ಯಶಸ್ಸಿನ ಹಾದಿಯನ್ನು ಸುಗಮಗೊಳಿಸುವ ದೇವತೆ ಎಂಬ ನಂಬಿಕೆ ಜನರಲ್ಲಿ ಬಲವಾಗಿದೆ.

**ಗಜಮುಖದ ಸಂದೇಶ**

ಗಣೇಶನ ರೂಪವೇ ಹಲವು ಆಧ್ಯಾತ್ಮಿಕ ಮತ್ತು ಜೀವನ ಮೌಲ್ಯಗಳನ್ನು ಒಳಗೊಂಡಿದೆ. ಮಾನವನ ದೇಹ ಹಾಗು ಆನೆಯ ಮುಖ ಹೊಂದಿರುವ ಗಣೇಶನ ಸ್ವರೂಪವು ವಿಶಿಷ್ಟವಾದದ್ದು. ಆನೆಯ ತಲೆಯು ಬಲ, ಬುದ್ಧಿವಂತಿಕೆ, ಶಾಂತಿ ಮತ್ತು ವಿಶಾಲ ದೃಷ್ಟಿಯ ಸಂಕೇತವೆಂದು ಪರಿಗಣಿಸಲಾಗುತ್ತದೆ.

ಗಣೇಶನ ದೊಡ್ಡ ಕಿವಿಗಳು ಹೆಚ್ಚು ಕೇಳಬೇಕು, ಕಡಿಮೆ ಮಾತನಾಡಬೇಕೆಂಬ ಸಂದೇಶವನ್ನು ನೀಡುತ್ತವೆ. ಒಳ್ಳೆಯ ನಾಯಕನಾಗಲಿ, ಜ್ಞಾನವನ್ನು ಅರಸುವ ವ್ಯಕ್ತಿಯಾಗಲಿ ಮೊದಲು ಇತರರ ಮಾತುಗಳನ್ನು ಆಲಿಸುವ ಗುಣ ಹೊಂದಿರಬೇಕು ಎಂಬ ಜೀವನ ಪಾಠವನ್ನು ಇದು ನೆನಪಿಸುತ್ತದೆ.

ಆತನ ಸಣ್ಣ ಕಣ್ಣುಗಳು ಏಕಾಗ್ರತೆಯ ಸಂಕೇತ. ಗುರಿಯ ಮೇಲೆ ಸಂಪೂರ್ಣ ಗಮನ ಕೇಂದ್ರೀಕರಿಸಿದಾಗ ಮಾತ್ರ ಯಶಸ್ಸು ಸಾಧ್ಯ ಎಂಬ ಸಂದೇಶವನ್ನು ಗಣೇಶನ ಕಣ್ಣುಗಳು ಸಾರುತ್ತವೆ.

ಗಣೇಶನ ಉದ್ದನೆಯ ಸೊಂಡಿಲು ಹೊಂದಿಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಸೊಂಡಿಲಿನಿಂದ ಭಾರವಾದ ವಸ್ತುವನ್ನೂ ಎತ್ತಬಹುದು, ಅಷ್ಟೇ ಸೂಕ್ಷ್ಮವಾದ ವಸ್ತುವನ್ನೂ ನಿರ್ವಹಿಸಬಹುದು. ಜೀವನದಲ್ಲಿಯೂ ಸಂದರ್ಭಕ್ಕೆ ತಕ್ಕಂತೆ ಬದಲಾಗುವ, ದೊಡ್ಡ ಸಮಸ್ಯೆಗಳನ್ನು ಎದುರಿಸುವ ಜೊತೆಗೆ ಸಣ್ಣ ಸಂಗತಿಗಳನ್ನೂ ಸೂಕ್ಷ್ಮವಾಗಿ ಗಮನಿಸುವ ಗುಣ ಅಗತ್ಯ ಎಂಬುದನ್ನು ಇದು ತಿಳಿಸುತ್ತದೆ.



**ಏಕದಂತನ ಸಂದೇಶ**

ಗಣೇಶನಿಗೆ ಏಕದಂತ ಎಂಬ ಹೆಸರು ಕೂಡ ಇದೆ. ಅಂದರೆ ಒಂದೇ ದಂತವನ್ನು ಹೊಂದಿರುವವನು. ಗಣೇಶನ ಒಂದು ದಂತ ಮುರಿದಿರುವುದರ ಹಿಂದೆ ಹಲವು ಪೌರಾಣಿಕ ಕಥೆಗಳಿವೆ.

ಒಂದು ಪ್ರಸಿದ್ಧ ಕಥೆಯ ಪ್ರಕಾರ, ಮಹಾಭಾರತವನ್ನು ಲಿಖಿತ ರೂಪದಲ್ಲಿ ದಾಖಲಿಸುವ ಸಂದರ್ಭದಲ್ಲಿ ವ್ಯಾಸ ಮಹರ್ಷಿಯವರ ಮಾತಿನ ವೇಗಕ್ಕೆ ತಕ್ಕಂತೆ ಬರೆಯಲು ಗಣೇಶನು ತನ್ನದೇ ದಂತವನ್ನು ಲೇಖನಿಯನ್ನಾಗಿ ಮಾಡಿಕೊಂಡನು ಎಂದು ಹೇಳಲಾಗುತ್ತದೆ. ಈ ಕಥೆಯ ಮೂಲಕ ಜ್ಞಾನಕ್ಕಾಗಿ ತ್ಯಾಗ ಮಾಡುವ ಮನೋಭಾವವನ್ನು ಪ್ರತಿಪಾದಿಸಲಾಗಿದೆ.

ಜ್ಞಾನವನ್ನು ಪಡೆಯುವುದು ಅಥವಾ ಜ್ಞಾನವನ್ನು ಸಮಾಜಕ್ಕೆ ತಲುಪಿಸುವುದು ಸುಲಭದ ಕೆಲಸವಲ್ಲ. ಅದಕ್ಕಾಗಿ ಪರಿಶ್ರಮ, ತ್ಯಾಗ ಮತ್ತು ಏಕಾಗ್ರತೆ ಅಗತ್ಯ. ಗಣೇಶನ ಏಕದಂತದ ರೂಪದಲ್ಲಿ ಇಂತಹ ಮೌಲ್ಯಗಳನ್ನು ಕಾಣಬಹುದು.

ಗಣೇಶನ ಮತ್ತೊಂದು ಗಮನಾರ್ಹ ಲಕ್ಷಣವೆಂದರೆ ಆತನ ದೊಡ್ಡ ಹೊಟ್ಟೆ. ಇದನ್ನು ಕೇವಲ ದೇಹದ ಆಕಾರವೆಂದು ನೋಡದೆ, ಜೀವನದ ಒಳ್ಳೆಯದು-ಕೆಟ್ಟದು, ಸುಖ-ದುಃಖ, ಯಶಸ್ಸು-ವಿಫಲತೆ ಸೇರಿ ಎಲ್ಲಾ ಅನುಭವಗಳನ್ನು ಸಮಚಿತ್ತದಿಂದ ಸ್ವೀಕರಿಸುವ ಸಾಮರ್ಥ್ಯದ ಸಂಕೇತವಾಗಿ ಅರ್ಥೈಸಲಾಗುತ್ತದೆ.

ಜೀವನದಲ್ಲಿ ಎಲ್ಲವೂ ನಮ್ಮ ನಿರೀಕ್ಷೆಯಂತೆ ನಡೆಯುವುದಿಲ್ಲ. ಕೆಲವೊಮ್ಮೆ ಯಶಸ್ಸು ಸಿಗುತ್ತದೆ, ಕೆಲವೊಮ್ಮೆ ವಿಫಲತೆ ಎದುರಾಗುತ್ತದೆ. ಟೀಕೆ, ಅವಮಾನ, ಕಷ್ಟ, ನೋವು, ಸಂತೋಷ ಎಲ್ಲವನ್ನೂ ಸಮತೋಲನದಿಂದ ಸ್ವೀಕರಿಸುವ ಮನೋಭಾವ ಇರಬೇಕು. ಗಣೇಶನ ದೊಡ್ಡ ಹೊಟ್ಟೆ ಈ ಸಹನೆಯ ಸಂದೇಶವನ್ನು ನೀಡುತ್ತದೆ.

ಗಣೇಶನ ವಾಹನವಾಗಿ ಇಲಿಯನ್ನು ಚಿತ್ರಿಸಲಾಗುತ್ತದೆ. ಬೃಹತ್ ದೇಹ ಹೊಂದಿರುವ ಗಣೇಶನಿಗೆ ಸಣ್ಣ ಇಲಿಯೇ ವಾಹನವಾಗಿರುವುದು ನೋಡಲು ವಿಶಿಷ್ಟವಾಗಿ ಕಾಣುತ್ತದೆ. ಆದರೆ ಇದರಲ್ಲೂ ಆಳವಾದ ಅರ್ಥವಿದೆ.

ಇಲಿಯನ್ನು ಮಾನವನ ಆಸೆ, ಚಂಚಲತೆ ಮತ್ತು ಅತೃಪ್ತಿಯ ಸಂಕೇತವಾಗಿ ಕೆಲವೊಮ್ಮೆ ವ್ಯಾಖ್ಯಾನಿಸಲಾಗುತ್ತದೆ. ಮನುಷ್ಯನ ಮನಸ್ಸು ಕೂಡ ಒಂದು ಕ್ಷಣ ಇಲ್ಲಿ, ಮತ್ತೊಂದು ಕ್ಷಣ ಅಲ್ಲಿ ಎಂದು ನಿರಂತರವಾಗಿ ಓಡಾಡುತ್ತಿರುತ್ತದೆ. ಗಣೇಶನು ಇಲಿಯ ಮೇಲೆ ಸವಾರಿ ಮಾಡುವ ಮೂಲಕ ಆಸೆ ಮತ್ತು ಚಂಚಲ ಮನಸ್ಸಿನ ಮೇಲೆ ನಿಯಂತ್ರಣ ಹೊಂದಿರುವ ಶಕ್ತಿಯ ಸಂಕೇತವಾಗುತ್ತಾನೆ.

ಇನ್ನೊಂದು ಅರ್ಥದಲ್ಲಿ ನೋಡಿದರೆ, ದೊಡ್ಡದು-ಸಣ್ಣದು ಎಂಬ ಭೇದವಿಲ್ಲದೆ ಎಲ್ಲಾ ಜೀವಿಗಳಿಗೂ ಮಹತ್ವವಿದೆ ಎಂಬ ಸಮಾನತೆಯ ಸಂದೇಶವೂ ಇಲ್ಲಿ ಕಾಣಿಸುತ್ತದೆ.

ಮೋದಕದ ಮಹತ್ವ

ಗಣೇಶನಿಗೆ ಮೋದಕ ಅತ್ಯಂತ ಪ್ರಿಯ ಎಂಬ ನಂಬಿಕೆ ಜನರಲ್ಲಿ ಇದೆ. ಗಣೇಶನ ಕೈಯಲ್ಲಿ ಅಥವಾ ಆತನ ಮುಂದೆ ಮೋದಕವನ್ನು ಸಾಮಾನ್ಯವಾಗಿ ಕಾಣಬಹುದು. ಮೋದಕದ ಹೊರಭಾಗ ಸರಳವಾಗಿದ್ದರೂ ಒಳಗೆ ಸಿಹಿಯಾದ ಹೂರಣವಿರುತ್ತದೆ. ಇದನ್ನು ಜ್ಞಾನದೊಂದಿಗೆ ಹೋಲಿಸಲಾಗುತ್ತದೆ. ಪರಿಶ್ರಮದ ಹೊರಪದರವನ್ನು ದಾಟಿ ಜ್ಞಾನವನ್ನು ಗಳಿಸಿದಾಗ ಅದರ ನಿಜವಾದ ಸಿಹಿಯನ್ನು ಅನುಭವಿಸಬಹುದು ಎಂಬ ಸಂದೇಶವನ್ನು ಮೋದಕ ಪ್ರತಿನಿಧಿಸುತ್ತದೆ ಎಂದು ಭಕ್ತಿಪರ ವ್ಯಾಖ್ಯಾನದಲ್ಲಿ ಹೇಳಲಾಗುತ್ತದೆ. ಆದ್ದರಿಂದ ಗಣೇಶನಿಗೆ ಮೋದಕ ಅರ್ಪಿಸುವುದು ಕೇವಲ ನೈವೇದ್ಯದ ಸಂಪ್ರದಾಯವಲ್ಲ; ಅದು ಜ್ಞಾನ ಮತ್ತು ಆಂತರಿಕ ಸಂತೋಷದ ಸಂಕೇತವೂ ಆಗಿದೆ.

ವಿಘ್ನಗಳನ್ನು ನಿವಾರಿಸುವ ವಿನಾಯಕ

ಗಣೇಶನಿಗೆ ವಿಘ್ನೇಶ್ವರ ಮತ್ತು ವಿಘ್ನ ವಿನಾಯಕ ಎಂಬ ಹೆಸರುಗಳಿರುವುದಕ್ಕೆ ಮುಖ್ಯ ಕಾರಣ, ಜೀವನದ ಅಡೆತಡೆಗಳನ್ನು ನಿವಾರಿಸುವ ದೇವತೆ ಎಂಬ ಭಕ್ತರ ನಂಬಿಕೆ. ಇಲ್ಲಿ ವಿಘ್ನ ಎಂದರೆ ಕೇವಲ ಹೊರಗಿನ ಅಡೆತಡೆಗಳಲ್ಲ. ಮನುಷ್ಯನೊಳಗಿನ ಭಯ, ಅಜ್ಞಾನ, ಅಹಂಕಾರ, ಸೋಮಾರಿತನ, ಗೊಂದಲ ಮತ್ತು ಆತ್ಮವಿಶ್ವಾಸದ ಕೊರತೆಯೂ ವಿಘ್ನಗಳೇ. ಇಂತಹ ಅಂತ ರಂಗದ ಅಡೆತಡೆಗಳನ್ನು ಗೆಲ್ಲಲು ಜ್ಞಾನ, ವಿವೇಕ, ಧೈರ್ಯ ಮತ್ತು ಪರಿಶ್ರಮ ಅಗತ್ಯ. ಹೀಗಾಗಿ ಗಣೇಶನ ಆರಾಧನೆಯ ನಿಜವಾದ ಅರ್ಥವನ್ನು ನನ್ನ ಎಲ್ಲಾ ಸಮಸ್ಯೆಗಳನ್ನು ದೇವರೇ ಪರಿ ಹರಿಸಲಿ ಎಂಬುದಕ್ಕಿಂತ, ಸಮಸ್ಯೆಗಳನ್ನು ಎದುರಿಸುವ ಬುದ್ಧಿ, ಧೈರ್ಯ ಮತ್ತು ವಿವೇಕವನ್ನು ನನಗೆ ನೀಡಲಿ ಎಂಬ ದೃಷ್ಟಿಕೋನದಲ್ಲಿ ಅರ್ಥೈಸಬಹುದು.

ಗಣೇಶ ಚತುರ್ಥಿ ಇಂದು ಧಾರ್ಮಿಕ ಹಬ್ಬದ ಗಡಿಯನ್ನು ಮೀರಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಉತ್ಸವವಾಗಿಯೂ ಬೆಳೆದಿದೆ. ವಿವಿಧ ಜಾತಿ, ಧರ್ಮ ಮತ್ತು ಸಮುದಾಯಗಳ ಜನರು ಒಟ್ಟಾಗಿ ಸೇರಿ ಹಬ್ಬವನ್ನು ಆಚರಿಸುವ ಮೂಲಕ ಸಾಮಾಜಿಕ ಸಾಮರಸ್ಯವನ್ನು ಬಲಪಡಿಸುತ್ತಾರೆ.

**ಗಣೇಶನಿಂದ ಕಲಿಯಬೇಕಾದ ಜೀವನ ಪಾಠಗಳು**

**ದೊಡ್ಡ ಕಿವಿಗಳು - ಹೆಚ್ಚು ಆಲಿಸಬೇಕು**

**ಸಣ್ಣ ಕಣ್ಣುಗಳು - ಗುರಿಯ ಮೇಲೆ ಏಕಾಗ್ರತೆ ಇರಬೇಕು**

**ಉದ್ದನೆಯ ಸೊಂಡಿಲು - ಪರಿಸ್ಥಿತಿಗೆ ಹೊಂದಿಕೊಳ್ಳಬೇಕು**

**ಏಕದಂತ - ಜ್ಞಾನಕ್ಕಾಗಿ ತ್ಯಾಗ ಮಾಡಬೇಕು.**

**ದೊಡ್ಡ ಹೊಟ್ಟೆ - ಜೀವನದ ಏರಿಳಿತಗಳನ್ನು ಸಹನೆಯಿಂದ ಸ್ವೀಕರಿಸಬೇಕು.**

**ಇಲಿ ವಾಹನ - ಆಸೆ ಮತ್ತು ಚಂಚಲ ಮನಸ್ಸನ್ನು ನಿಯಂತ್ರಿಸಬೇಕು.**

**ಮೋದಕ - ಪರಿಶ್ರಮದ ನಂತರ ಜ್ಞಾನದ ಸಿಹಿ ದೊರೆಯುತ್ತದೆ.**

**ಈ ಕಾರಣದಿಂದಲೇ ಗಣೇಶನು ಮಕ್ಕಳಿಂದ ಹಿರಿಯರವರೆಗೆ ಎಲ್ಲರಿಗೂ ಹತ್ತಿರವಾಗಿರುವ ದೇವತೆಯಾಗಿ ಕಾಣಿಸುತ್ತಾನೆ.**

ಗಣೇಶ ಭಾರತೀಯರ ಮನಸ್ಸಿನಲ್ಲಿರುವ ನಂಬಿಕೆ.

ಭಾರತದ ಬಹುತೇಕ ಭಾಗಗಳಲ್ಲಿ ಗಣೇಶನ ಆರಾಧನೆ ವಿವಿಧ ರೂಪಗಳಲ್ಲಿ ಕಂಡುಬರುತ್ತದೆ. ದೇವಸ್ಥಾನಗಳಲ್ಲಿ ಮಾತ್ರವಲ್ಲದೆ ಮನೆ, ಕಚೇರಿ, ವ್ಯಾಪಾರ ಸಂಸ್ಥೆ, ಶಿಕ್ಷಣ ಸಂಸ್ಥೆ ಸೇರಿ ಹಲವು ಸ್ಥಳಗಳಲ್ಲಿ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಹೊಸ ಕೆಲಸ ಆರಂಭಿಸುವಾಗ ಗಣೇಶನನ್ನು ನೆನೆಯುವುದು, ಪರೀಕ್ಷೆಗೆ ಹೋಗುವ ವಿದ್ಯಾರ್ಥಿ ಗಣೇಶನಿಗೆ ನಮಿಸುವುದು, ಹೊಸ ವಾಹನ ಖರೀದಿಸಿದಾಗ ಪೂಜೆ ಸಲ್ಲಿಸುವುದು, ಹೊಸ ಮನೆ ಪ್ರವೇಶಿಸುವಾಗ ಗಣಪತಿ ಪೂಜೆ ಮಾಡುವುದು ಇವೆಲ್ಲವೂ ಭಾರತೀಯರ ದೈನಂದಿನ ಬದುಕಿನಲ್ಲಿ ಗಣೇಶನಿಗೆ ಇರುವ ಸ್ಥಾನವನ್ನು ತೋರಿಸುತ್ತವೆ.

ಗಣೇಶನ ಮೇಲಿನ ಈ ನಂಬಿಕೆ ಕೇವಲ ಧಾರ್ಮಿಕ ಭಾವನೆಯಲ್ಲ. ಅದು ಒಳ್ಳೆಯದನ್ನು ಆರಂಭಿಸುವ ಮುನ್ನ ಮನಸ್ಸನ್ನು ಸಿದ್ಧಪಡಿಸಿಕೊಳ್ಳುವ ಒಂದು ಸಾಂಸ್ಕೃತಿಕ ಪದ್ಧತಿಯಾಗಿಯೂ ಕಾಣಬಹುದು.

ವಿಘ್ನ ನಿವಾರಕ ಗಣೇಶನು ಭಾರತೀಯ ಸಂಸ್ಕೃತಿಯಲ್ಲಿ ಭಕ್ತಿ ಮತ್ತು ನಂಬಿಕೆಯ ಪ್ರತೀಕ ಮಾತ್ರವಲ್ಲ. ಆತನ ರೂಪದ ಪ್ರತಿಯೊಂದು ಅಂಶವೂ ಬದುಕಿನ ಅಮೂಲ್ಯ ಸಂದೇಶಗಳನ್ನು ಒಳಗೊಂಡಿದೆ. ಜ್ಞಾನವನ್ನು ಬೆಳೆಸಿಕೊಳ್ಳಬೇಕು, ಇತರರ ಮಾತುಗಳನ್ನು ಆಲಿಸಬೇಕು, ಗುರಿಯ ಮೇಲೆ ಏಕಾಗ್ರತೆ ಇರಬೇಕು, ಪರಿಸ್ಥಿತಿಗೆ ಹೊಂದಿಕೊಳ್ಳಬೇಕು, ಆಸೆಗಳನ್ನು ನಿಯಂತ್ರಿಸಬೇಕು, ಕಷ್ಟಗಳನ್ನು ಸಹನೆಯಿಂದ ಎದುರಿಸಬೇಕು ಮತ್ತು ಯಶಸ್ಸಿನ ಹಿಂದೆ ಪರಿಶ್ರಮ ಇರಬೇಕು ಎಂಬ ಜೀವನ ಮೌಲ್ಯಗಳನ್ನು ಗಣೇಶನ ಸ್ವರೂಪ ನಮಗೆ ನೆನಪಿಸುತ್ತದೆ.

ಆದ್ದರಿಂದಲೇ ಯಾವುದೇ ಶುಭಕಾರ್ಯ ಆರಂಭಿಸುವ ಮುನ್ನ ಮೊದಲು ಗಣೇಶನನ್ನು ಸ್ಮರಿಸಲಾಗುತ್ತದೆ. ವಿಘ್ನಗಳು ದೂರವಾಗಲಿ, ಜ್ಞಾನದ ಬೆಳಕು ಮೂಡಲಿ, ಬದುಕಿನಲ್ಲಿ ಯಶಸ್ಸು ಮತ್ತು ಸಮೃದ್ಧಿ ನೆಲೆಸಲಿ ಎಂಬ ಆಶ ಯದೊಂದಿಗೆ ಗಣೇಶನನ್ನು ಆರಾಧಿಸಲಾಗುತ್ತದೆ.



# ಫೋನ್ ಚಾರ್ಜ್‌ಗೆ ಹಾಕಿ ಮಲಗಿದಾಗ ಏನಾಗುತ್ತದೆ? ಓದಿದರೆ ಖುಷಿಪಡುತ್ತೀರಿ!

ರಾತ್ರಿ ನಾವೆಲ್ಲರೂ ಮಲಗಿರುವಾಗ ಆಂಡ್ರಾಯ್ಡ್ ಫೋನ್ ನಿಮಗಾಗಿ ಕೆಲಸ ಮಾಡುತ್ತಿರುತ್ತದೆ, ನಮ್ಮ ಹೃದಯದಂತೆಯೇ!

ರಾತ್ರಿ ಮಲಗುವಾಗ ನಿಮ್ಮ ಸ್ಮಾರ್ಟ್‌ಫೋನ್ ಸುಮ್ಮನೆ ಬಿದ್ದಿರುವುದಿಲ್ಲ. ಫೋನ್ ಚಾರ್ಜ್ ಆಗುತ್ತಿರುವಂತೆಯೇ ಅದು ತನ್ನ ಬ್ಯಾಟರಿ ಸುರಕ್ಷತೆ, ಆಪ್‌ಗಳ ವೇಗವರ್ಧನೆ, ಎಐ ತರಬೇತಿ ಮತ್ತು ಸ್ಟೋರೇಜ್ ನಿರ್ವಹಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಮರುದಿನ ಬೆಳಿಗ್ಗೆ ಹೊಸದಾಗಿ ಬಳಸಲು ಸಿದ್ಧವಾಗಿರುತ್ತದೆ!

ನಾವು ಪ್ರತಿದಿನ ರಾತ್ರಿ ಮಲಗುವಾಗ ಸ್ಮಾರ್ಟ್‌ಫೋನ್ ಅನ್ನು ಚಾರ್ಜರ್‌ಗೆ ಸಿಕ್ಕಿಸಿ ನಿಶ್ಚಿಂತೆಯಿಂದ ನಿದ್ರಿಸುತ್ತೇವೆ. ಮೇಲ್ನೋಟಕ್ಕೆ ಫೋನ್ ಬ್ಯಾಟರಿ ಮಾತ್ರ ಚಾರ್ಜ್ ಆಗುತ್ತಿದೆ ಎನಿಸಿದರೂ, ಹಿನ್ನೆಲೆಯಲ್ಲಿ ನಿಮ್ಮ ಫೋನ್ ಅತ್ಯಂತ ಶ್ರಮದಾಯಕ ಮತ್ತು ಕಠಿಣ ಕೆಲಸಗಳಲ್ಲಿ ತೊಡಗಿರುತ್ತದೆ! ಒಂದು ರೀತಿಯಲ್ಲಿ ಹೇಳುವುದಾದರೆ ನಮ್ಮ-ನಿಮ್ಮ ಹೃದಯ ಕೆಲಸ ಮಾಡಿದಂತೆ!

ಹೌದು, ಆಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯು ಸಾಧನವು ಬಳಕೆಯಲ್ಲಿಲ್ಲದ, -ವೈಫೈ ಸಂಪರ್ಕದಲ್ಲಿರುವ ಹಾಗೂ ಚಾರ್ಜ್ ಆಗುತ್ತಿರುವ ಸಮಯವನ್ನು ಬಳಸಿಕೊಂಡು ಹಲವಾರು ಪ್ರಮುಖ ತಾಂತ್ರಿಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಆಂಡ್ರಾಯ್ಡ್ ತಜ್ಞರ ಪ್ರಕಾರ, ರಾತ್ರಿಯ ವೇಳೆ ನಿಮ್ಮ ಸ್ಮಾರ್ಟ್‌ಫೋನ್ ಯಾರಿಗೂ ತಿಳಿಯದಂತೆ ಮಾಡುವ 4 ಪ್ರಮುಖ ಪ್ರಕ್ರಿಯೆಗಳ ವಿವರ ಇಲ್ಲಿದೆ.

**1. ಬ್ಯಾಟರಿ ಆಯುಷ್ಯ ಹೆಚ್ಚಿಸುವ ಸ್ಮಾರ್ಟ್ ಚಾರ್ಜಿಂಗ್**

ಹಿಂದಿನ ಕಾಲದ ಫೋನ್‌ಗಳಲ್ಲಿ ಇಡೀ ರಾತ್ರಿ ಚಾರ್ಜ್‌ಗೆ ಹಾಕಿದರೆ ಬ್ಯಾಟರಿ ಬೇಗನೇ ಹಾಳಾಗಿ ಅಂದರೆ ಸವೆತ ಕಂಡು, ಕಡಿಮೆ ಬಾಳಿಕೆ ಬರುವ ಅಪಾಯವಿತ್ತು. ಆದರೆ ಇಂದಿನ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳು ಸ್ಮಾರ್ಟ್ ಚಾರ್ಜಿಂಗ್ ತಂತ್ರಜ್ಞಾನವನ್ನು ಹೊಂದಿವೆ.

**ಬ್ಯಾಟರಿ ರಕ್ಷಣೆ:** ಫೋನ್ ಅನ್ನು ಇಡೀ ರಾತ್ರಿ ಶೇ. 100ರಷ್ಟು ವೋಲ್ಟೇಜ್‌ನಲ್ಲಿ ಇರಿಸಿದರೆ ಬ್ಯಾಟರಿಯ ಜೀವಿತಾವಧಿ ಕಡಿಮೆಯಾಗುತ್ತದೆ.

**ಸ್ಮಾರ್ಟ್ ತಂತ್ರ:** ಈಗಿನ ಸ್ಮಾರ್ಟ್‌ಫೋನುಗಳು ನೀವು ಬೆಳಿಗ್ಗೆ ಎಷ್ಟು ಗಂಟೆಗೆ ಏಳುತ್ತೀರಿ ಅಥವಾ ಫೋನ್ ಕೈಗೆತ್ತಿಕೊಳ್ಳುತ್ತೀರಿ ಎಂಬುದನ್ನು ಕೃತಕ ಬುದ್ಧಿಮತ್ತೆ ಮೂಲಕ ಅಂದಾಜಿಸುತ್ತದೆ.

**ನಿಧಾನಗತಿಯ ಚಾರ್ಜಿಂಗ್:** ರಾತ್ರಿಯಿಡೀ ಬ್ಯಾಟರಿಯನ್ನು ಶೇ. 80ರಷ್ಟು ಮಾತ್ರ ಚಾರ್ಜ್ ಮಾಡಿ, ನೀವು ಏಳುವ ಕೆಲವೇ ನಿಮಿಷಗಳ ಮೊದಲು ಉಳಿದ ಶೇ. 20ರಷ್ಟು ಚಾರ್ಜ್ ಮಾಡಿ 100% ತಲುಪಿಸುತ್ತದೆ. ಇದು ಸ್ಮಾರ್ಟ್ ಚಾರ್ಜಿಂಗ್ ವ್ಯವಸ್ಥೆ. ಇದರಿಂದಾಗಿ ಬ್ಯಾಟರಿಯ ಬಾಳಿಕೆ ಹೆಚ್ಚುತ್ತದೆ.

**2. ಕೆಲಸದ ವೇಳಾಪಟ್ಟಿ ನಿಯಂತ್ರಕ ಮೂಲಕ ಜಿಬೋರ್ಡ್ ಎಐ ತರಬೇತಿ**

ನೀವು ಕೀಬೋರ್ಡ್‌ನಲ್ಲಿ ಟೈಪ್ ಮಾಡುವ ಶೈಲಿಯನ್ನು ಆಧರಿಸಿ ಮುಂದಿನ ಪದಗಳನ್ನು ಊಹಿಸುವ ಜಿಬೋರ್ಡ್ ತಂತ್ರಜ್ಞಾನ ರಾತ್ರಿಯೇ ಅಪ್‌ಡೇಟ್ ಆಗುತ್ತದೆ. ಈ ಪ್ರಕ್ರಿಯೆಯನ್ನು ಆಂಡ್ರಾಯ್ಡ್‌ನ ಕೆಲಸದ ವೇಳಾಪಟ್ಟಿ ನಿಯಂತ್ರಕ ಎಂಬ ಸೇವೆಯು ನಿಯಂತ್ರಿಸುತ್ತದೆ.

**ಡೇಟಾ ಪ್ರಕ್ರಿಯೆ:** ಹಗಲಿನಲ್ಲಿ ನೀವು ಟೈಪ್ ಮಾಡಿದ ಪದಗಳು, ಸ್ವಯಂ ತಿದ್ದುಪಡಿ ವಿವರಗಳು ಫೋನ್‌ನಲ್ಲೇ (ಲೋಕಲ್ ಸ್ಟೋರೇಜ್‌ನಲ್ಲಿ) ಸಂಗ್ರಹವಾಗಿರುತ್ತವೆ.

**ಖಾಸಗಿತನ ಕಾಯ್ದುಕೊಳ್ಳುವಿಕೆ:** ರಾತ್ರಿ ಫೋನ್ ಚಾರ್ಜ್‌ಗೆ ಬಿದ್ದಾಗ, ಗೂಗಲ್ ಸರ್ವರ್‌ನಿಂದ ಬರುವ ಎಐ ಮಾದರಿಯು, ನಿಮ್ಮ ಟೈಪಿಂಗ್ ಶೈಲಿಯನ್ನು ಅಭ್ಯಾಸ ಮಾಡುತ್ತದೆ.

**ಸುರಕ್ಷಿತ ಸಲ್ಲಿಕೆ:** ನೀವು ಟೈಪ್ ಮಾಡಿದ ಸಾಲುಗಳು ಅಥವಾ ಖಾಸಗಿ ಮೆಸೇಜ್‌ಗಳು ಸರ್ವರ್‌ಗೆ ಹೋಗುವುದಿಲ್ಲ; ಬದಲಿಗೆ ಕೇವಲ ಗಣಿತೀಯ ಡೇಟಾ ಮಾತ್ರ ಗೂಗಲ್‌ಗೆ ರವಾನೆಯಾಗುತ್ತದೆ ಎಂಬ ಮಾಹಿತಿ ಇದೆ.

ಇದನ್ನು ಜಿಬೋರ್ಡ್ ಕೀಬೋರ್ಡ್‌ನ ಕಾರ್ಯಕ್ಷಮತೆ ವರ್ಧಿಸಲು ಮಾತ್ರ ಬಳಸಲಾಗುತ್ತದೆ ಎಂದು ಗೂಗಲ್ ಹೇಳಿಕೊಳ್ಳುತ್ತಿದೆಯಾದರೂ, ನಾವು ಜಿಬೋರ್ಡ್ ಮೂಲಕ ಟೈಪ್ ಮಾಡಿದ ಅಕ್ಷರಗಳು (ಉದಾಹರಣೆಗೆ, ಪಾಸ್‌ವರ್ಡ್ ಮುಂತಾದ ಸೂಕ್ಷ್ಮ ವಿಚಾರಗಳು) ಸುರಕ್ಷಿತವೇ ಎಂಬ ಬಗ್ಗೆ ತಾಂತ್ರಿಕವಾಗಿ ಖಚಿತವಾಗಿ ಹೇಳಲಾಗದು ಎಂಬುದು ಗಮನದಲ್ಲಿರಲಿ.

**3. ಗ್ಯಾಲರಿ ಮತ್ತು ಫೋಟೋಗಳ ಸ್ಕ್ಯಾನಿಂಗ್**

ನಿಮ್ಮ ಫೋನ್ ಗ್ಯಾಲರಿಯನ್ನು ನೋಡಿದರೆ, ಅದರಲ್ಲಿ ವ್ಯಕ್ತಿಗಳ ಮುಖದ ಆಧಾರದಲ್ಲಿ, ವಸ್ತುಗಳ ಆಧಾರದಲ್ಲಿ, ಫೋಟೋ ಸೆರೆಹಿಡಿದ ಸ್ಥಳದ ಆಧಾರದಲ್ಲಿ ಸಾಕಷ್ಟು ಪ್ರತ್ಯೇಕ ವರ್ಗೀಕರಣ ವ್ಯವಸ್ಥೆ ಇರುತ್ತದೆ. ಪ್ರಾಣಿಗಳನ್ನು ಬೇರೆಯೇ ಫೋಲ್ಡರ್‌ನಲ್ಲಿ ತೋರಿಸುವ ವ್ಯವಸ್ಥೆಯೂ ಇದೆ. ಹೀಗೆ ಫೋನ್ ಗ್ಯಾಲರಿಯಲ್ಲಿ ಮುಖಗಳನ್ನು ಗುರುತಿಸಿ ಪ್ರತ್ಯೇಕ ಆಲ್ಬಮ್ ಮಾಡುವುದು, ಬ್ಲರ್ ಆಗಿರುವ ಫೋಟೋಗಳನ್ನು ಪತ್ತೆ ಹಚ್ಚುವುದು ಹಾಗೂ ಶೋಧ ಪಟ್ಟಿಯಲ್ಲಿ ನಾಯಿ ಅಥವಾ ಕಾರು ಎಂದು ಟೈಪ್ ಮಾಡಿದರೆ ತಕ್ಷಣ ಆ ಫೋಟೋ ತೋರಿಸುವುದು ಹೇಗೆ ಸಾಧ್ಯ ಎಂಬ ಪ್ರಶ್ನೆ ನಿಮಗಿದೆಯೇ?

ಇದಕ್ಕಾಗಿ ನಿಮ್ಮ ಫೋನ್‌ನಲ್ಲಿರುವ ವಿಷನ್ ಎಐ ಮತ್ತು ಒಸಿಆರ್ ಮಾದರಿಗಳು ರಾತ್ರಿ ಚಾರ್ಜಿಂಗ್ ಸಮಯದಲ್ಲಿ ಇಡೀ ಗ್ಯಾಲರಿಯನ್ನು (ಎಲ್ಲ ಫೈಲುಗಳನ್ನು ಅಂದರೆ ಫೋಟೊ, ವಿಡಿಯೊ, ಸ್ಕ್ರೀನ್ ಶಾಟ್ ಇತ್ಯಾದಿ) ಸ್ಕ್ಯಾನ್ ಮಾಡಿ, ಈ ವರ್ಗೀಕರಣ ಕಾರ್ಯದಲ್ಲಿ ನಿರತವಾಗುತ್ತವೆ. ಈ ಭಾರಿ



ಪ್ರಮಾಣದ ಪ್ರಕ್ರಿಯೆಗೆ ಹೆಚ್ಚಿನ ಪ್ರೊಸೆಸರ್ ಶಕ್ತಿ ಮತ್ತು ಬ್ಯಾಟರಿ ಅಗತ್ಯವಿರುತ್ತದೆ. ರಾತ್ರಿವೇಳೆ ಬೇರೆ ಏನೂ ಕೆಲಸ ಇಲ್ಲದಿರುವಾಗ ಎಐ ಮಾಡೆಲ್‌ಗಳು ಈ ಕಾರ್ಯ ಕೈಗೆತ್ತಿಕೊಂಡು, ಫೋನ್‌ನಲ್ಲಿರುವ ಫೋಟೊಗಳು ಸರ್ಚ್‌ಗೆ ಲಭ್ಯವಾಗುವಂತೆ ವರ್ಗೀಕರಿಸುವಲ್ಲಿ ನಿರತವಾ ಗಿರುತ್ತವೆ. ಈ ರೀತಿಯ ಎಐ ವರ್ಗೀಕರಣ ಪ್ರಕ್ರಿಯೆಗೆ ಸಾಕಷ್ಟು ಚಾರ್ಜ್, ವೈಫೈ ಅಥವಾ ಇಂಟರ್‌ನೆಟ್ ಸಂಪರ್ಕ ಪೂರಕವಾಗುತ್ತದೆ.

**4. ಆಪ್‌ಗಳ ವೇಗ ಹೆಚ್ಚಿಸುವ ಅಪ್ಲಿಕೇಶನ್ ಟ್ಯೂನಿಂಗ್**

ಹಿಂದಿನ ಫೋನ್‌ಗಳಲ್ಲಿ ಆ್ಯಪ್ ತೆರೆದರೆ ಪೂರ್ತಿಯಾಗಿ ಓಪನ್ ಆಗುವುದಕ್ಕೆ ಸಾಕಷ್ಟು ಸಮಯ ಬೇಕಾಗುತ್ತಿತ್ತು. ಆದರೆ ಈಗ ಹಾಗಿಲ್ಲ, ಕೆಲವು ಆ್ಯಪ್‌ಗಳನ್ನು ಕ್ಲಿಕ್ ಮಾಡಿದ ತಕ್ಷಣ ಕ್ಷಣಾರ್ಧದಲ್ಲಿ ಓಪನ್ ಆಗುವುದನ್ನು ನೀವು ಗಮನಿಸಿರಬಹುದು. ಆಂಡ್ರಾಯ್ಡ್ ನೌಗಾಟ್ ಆವೃತ್ತಿಯಿಂದ (ಅಂದರೆ ಆಂಡ್ರಾಯ್ಡ್ 7.0) ಗೂಗಲ್ ಎಆರ್‌ಟಿ ಎಂಬ ತಂತ್ರಜ್ಞಾನವನ್ನು ಪರಿಚಯಿಸಿರುವ ಕಾರಣದಿಂದಾಗಿ, ಆ್ಯಪ್‌ಗಳು ಕ್ಷಿಪ್ರವಾಗಿ ಕೆಲಸ ಮಾಡತೊಡಗಿವೆ.

| ಪ್ರಕ್ರಿಯೆಯ ಹಂತ | ವಿವರಣೆ |
|---|---|
| ಹಗಲಿನ ವೀಕ್ಷಣೆ | **ಹಗಲಿನಲ್ಲಿ ನೀವು ಯಾವ ಆ್ಯಪ್‌ಗಳನ್ನು ಹೆಚ್ಚು ಬಳಸುತ್ತೀರಿ ಮತ್ತು ಆ ಆ್ಯಪ್‌ನ ಯಾವ ವೈಶಿಷ್ಟ್ಯಗಳನ್ನು ಉಪಯೋಗಿಸುತ್ತೀರಿ ಎಂಬುದನ್ನು ಸಿಸ್ಟಮ್ ಗಮನಿಸುತ್ತದೆ.** |
| ರಾತ್ರಿಯ ಸಂಕಲನ | **ರಾತ್ರಿ, ಫೋನ್ ಮಲಗಿರುವಾಗ, ಆ್ಯಪ್‌ಗಳ ಕೋಡ್ ಅನ್ನು ಪ್ರೊಸೆಸರ್‌ಗೆ ತಕ್ಷಣ ಅರ್ಥವಾಗುವಂತೆ ಹಿನ್ನೆಲೆಯಲ್ಲಿ ಸಿದ್ಧಪಡಿಸಿ ಇಡುತ್ತದೆ.** |
| ಪರಿಣಾಮ | **ಮರುದಿನ ಬೆಳಿಗ್ಗೆ ನೀವು ಆ್ಯಪ್ ಓಪನ್ ಮಾಡಿದಾಗ ಅದು ಯಾವುದೇ ವಿಳಂಬವಿಲ್ಲದೆ ವೇಗವಾಗಿ ತೆರೆದುಕೊಳ್ಳುತ್ತದೆ.** |

**ಸಿಸ್ಟಮ್ ಕ್ಲೀನಿಂಗ್ ಮತ್ತು ಸ್ಟೋರೇಜ್ ನಿರ್ವಹಣೆ**

ಮೇಲೆ ತಿಳಿಸಿದ ನಾಲ್ಕು ಪ್ರಮುಖ ಕೆಲಸಗಳ ಜೊತೆಗೆ, ಫೋನ್ ತನ್ನ ಆಂತರಿಕ ಫ್ಲ್ಯಾಶ್ ಸ್ಟೋರೇಜ್ ಅನ್ನು ಸ್ವಚ್ಛಗೊಳಿಸುವ ಕೆಲಸವನ್ನೂ ರಾತ್ರಿಯೇ ಮಾಡುತ್ತದೆ. ಹಗಲಿನ ಹಲವಾರು ಆ್ಯಪ್‌ಗಳ ಬಳಕೆಯ ಸಂದರ್ಭದಲ್ಲಿ ಸಿಸ್ಟಮ್‌ನಲ್ಲಿ ಸಂಗ್ರಹವಾದ ನಿರುಪಯುಕ್ತ ಕ್ಯಾಶ್ ಫೈಲ್‌ಗಳು, ತಾತ್ಕಾಲಿಕ ಲಾಗ್ ಫೈಲ್‌ಗಳು ಮತ್ತು ಆಪ್‌ಗಳ ಡೇಟಾಬೇಸ್‌ಗಳನ್ನು ಅಚ್ಚುಕಟ್ಟಾಗಿ ಜೋಡಿಸಿಡುವ ಮೂಲಕ, ಫೋನ್ ಹ್ಯಾಂಗ್ ಆಗದಂತೆ ತಡೆಯುವ ಕೆಲಸ ಚಾಲ್ತಿಯಲ್ಲಿರುತ್ತದೆ.

# ಕಾರನ್ನು ಬಿಸಿಲಲ್ಲಿ ನಿಲ್ಲಿಸುವಾಗ

ಹಾಗೆ ಬಿಸಿಲೇರುತ್ತಿದೆ. ಬಿಸಿಲಲ್ಲಿಟ್ಟ ಕಾರುಗಳು ಬಿಸಿಯಾಗುತ್ತಿವೆ. ಇದಕ್ಕೆ ಕಾರಣ ಮುಚ್ಚಿಟ್ಟ ಕಾರಿನ ಗಾಜುಗಳು ಎಂಬುದು ಎಲ್ಲರಿಗೂ ಗೊತ್ತು. ಕಾಸರಗೋಡಿನಿಂದ ಮಂಗಳೂರು ಪ್ರಯಾಣದ ವೇಳೆ ಅಂತರ್ ರಾಜ್ಯ ಬಸ್ಸುಗಳನ್ನು ನಾವು ಬಳಸುತ್ತೇವೆ. ಅಲ್ಲಿ ಕರ್ನಾಟಕ ಮತ್ತು ಕೇರಳ ರಾಜ್ಯ ಬಸ್‌ಗಳು ಎರಡೂ ಇರುತ್ತವೆ. ಒಂದೇ ಟಿಕೆಟ್ ದರ, ಬೆನ್ನು ಮೂಳೆಯ ತಿರುಪು ಹೊಂದಿ ಬೆನ್ನು ನೋವು ಉಂಟುಮಾಡದ ಕರ್ನಾಟಕ ಸಾರಿಗೆ ಬಸ್ಸುಗಳಿದ್ದರೂ ನೀವು ಆಯ್ಕೆ ಮಾಡಿಕೊಳ್ಳುವುದು ಕೇರಳ ರಾಜ್ಯ ಸಾರಿಗೆಯನ್ನೇ ಅಲ್ಲವೇ? ಇದಕ್ಕೆ ಕಾರಣ ಕರ್ನಾಟಕ ರಾಜ್ಯ ಸಾರಿಗೆ ಬಸ್ಸಿನ ಕಿಟಕಿಗಳಿಗೆ ಹಾಕಿದ ಗಾಜು. ಗಾಜು ಒಳಗಿನ ಉಷ್ಣತೆಯನ್ನು ಹೆಚ್ಚಿಸುತ್ತದೆ. ಆದರೆ ಕೇರಳ ಸಾರಿಗೆಯ ಕಿಟಕಿಗೆ ಹಾಕಿದ ತಡ್ಪೆ ಕಿಟಕಿಗಳನ್ನು ತೆರೆದೇ ಇರಿಸುತ್ತದೆ. ಹೆಚ್ಚು ಖರ್ಚು ಮಾಡಿ ಆರಾಮದಾಯಕ ಪ್ರಯಾಣ ನೀಡಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸೋಲಲು ಕಾರಣ ಹಸಿರುಮನೆಯ ಪರಿಣಾಮ. ಕಾರಿನ ಒಳಗಡೆಯಾದರೆ ಉಷ್ಣತೆ 25 ರಿಂದ 30 ಅಂದರೆ 14 ರಿಂದ 17 ನಷ್ಟು ಹೆಚ್ಚಾಗಬಹುದು. ಅದರಲ್ಲಿಯೂ ಕಾರಿನ ಗಾಜಿಗೆ ನೀವು ಕಪ್ಪು ಪೇಪರ್ ಅಂಟಿಸಿದರೆ ಉಷ್ಣತೆ ಮತ್ತಷ್ಟು ಹೆಚ್ಚಬಹುದು. ಈ ಕಪ್ಪು ಪೇಪರ್ ಕಾರಿನ ಒಳ ಪ್ರವೇಶಿಸುವ ಬೆಳಕನ್ನು ಕಡಿಮೆ ಮಾಡುತ್ತದಲ್ಲ ಎನ್ನಬಹುದು. ಆದರೆ ವಿಷಯ ಬೇರೆಯೇ ಇದೆ. ಕಪ್ಪು ವಸ್ತುಗಳು ಶಾಖವನ್ನು ಬೇಗ ಹೀರಿಕೊಳ್ಳುತ್ತದೆ. ಇವುಗಳು ಸೌರ ಪ್ರತಿಫಲಕ ಗಾಜುಗಳಲ್ಲ. ಸೌರ ಪ್ರತಿಫಲಕ ಗಾಜುಗಳು ವಿಶೇಷವಾದ ವಿನ್ಯಾಸಾತ್ಮಕ ಗಾಜುಗಳು. ಇವುಗಳಲ್ಲಿ ಸೂಕ್ಷ್ಮವಾದ ಲೋಹದ ಅಥವಾ ಲೋಹದ ಆಕ್ಸೈಡ್‌ಗಳ ತುಣುಕುಗಳಿಂದಾದ ಲೇಪನವನ್ನು ಹೊಂದಿರುತ್ತವೆ. ಇವು ಬಹುಪಾಲು ಬೆಳಕಿನ ಪ್ರವೇಶವನ್ನು ನಿರ್ಬಂಧಿಸುತ್ತವೆ. ಆದರೆ ಇದು ತಂಪು ಕಾಗದವಲ್ಲ. ಹಾಗೆಯೇ ಬಿಸಿಲಿಗೆ ಹಿಡಿಯುವ ಕಪ್ಪು ಕೊಡೆ ಬಿಸಿಲನ್ನು



ತಡೆಯುತ್ತದೆಯೇ ಹೊರತು ನಿಮ್ಮ ಬುರುಡೆ ಕಾಯುತ್ತದೆ. ಆದರೆ ಇದು ಗಾಜಿನ ಮನೆಯ ಪರಿಣಾಮವಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಬಿಳಿಯ ವಸ್ತುಗಳು ಬೆಳಕನ್ನು ಪ್ರತಿಫಲಿಸುವುದರಿಂದ ಬಿಸಿ ಕಡಿಮೆ. ಬಿಜಾಪುರದವರ ಬಿಳಿ ಪಂಚೆ, ಬಿಳಿ ಅಂಗಿ ಮತ್ತು ತಲೆಯ ಮೇಲಿನ ಬಿಳಿಯ ಟೋಪಿ ಹಾಗೂ ಕೇರಳದವರ ಬಿಳಿಯ ಸೀರೆ ಮತ್ತು ಬಿಳಿಯ ಪಂಚೆಗಳ ಹಿಂದಿನ ರಹಸ್ಯ ಅರ್ಥವಾಯಿತೇ? ಆದರೆ ಮಂಗಳೂರಿನಲ್ಲಿ ಕರಿಯ ಕೋಟನ್ನು ಶಾಲಾ ಯೂನಿಫಾರ್ಮ್ ಎನ್ನುವವರಿಗೆ ವಿಜ್ಞಾನದ ತಿಳುವಳಿಕೆ ಇಲ್ಲ ಎನ್ನಬಹುದು.

ನೀವು ಕಾರಿನ ಎಲ್ಲ ಗಾಜುಗಳನ್ನು ಗಾಳಿಯಾಡದಂತೆ ಮುಚ್ಚಿ ಬಿಸಿಲಲ್ಲಿ ನಿಲ್ಲಿಸಿದ್ದರೆ ಮಧ್ಯಾಹ್ನ ಗಾಜಿನ ಮೇಲೆ ಬೀಳುವ ಪುಟ್ಟ ಕಲ್ಲು ಕೂಡಾ ನಿಮ್ಮ ಗಾಜನ್ನು ಒಡೆಯಬಲ್ಲುದು. ಇದಕ್ಕೆ ಕಾರಣ ಕಾಯಿಸಲ್ಪಟ್ಟ ಗಾಳಿ ಹಿಗ್ಗಿ ಒಳಗಡೆ ಉಂಟುಮಾಡುವ ಒತ್ತಡವೇ ಇದಕ್ಕೆ ಕಾರಣ. ಆದ್ದರಿಂದ ಬಿಸಿಲಲ್ಲಿ ಗಾಡಿ ನಿಲ್ಲಿಸುವಾಗ ಯಾವುದಾದರೂ ಒಂದು ಗಾಜು ಪೂರ್ತಿಯಾಗಿ ಮುಚ್ಚದೇ ಇರುವಂತೆ ನೋಡಿಕೊಳ್ಳಿ. ಕಾರಿನೊಳಗಿನ ಹಸಿರುಮನೆಯ ಪರಿಣಾಮ ಹೇಗಿರುತ್ತದೆ ಎಂದರೆ ಅದು ಡ್ಯಾಶ್ ಬೋರ್ಡ್ ನಲ್ಲಿ ಬಿರುಕುಗಳನ್ನುಂಟು ಮಾಡಬಹುದು. ಡ್ಯಾಶ್ ಬೋರ್ಡ್ ಮೇಲಿಟ್ಟಿರುವ ಬಿಡಿ ಹಾಳೆ ಹೊತ್ತಿಕೊಳ್ಳಬಹುದು. ಕಾರಿನ ಒಳಗೆ ಇರುವ ಜ್ವಲನಶೀಲ ವಸ್ತುಗಳು ಬೆಂಕಿಯನ್ನುಂಟು ಮಾಡಬಹುದು. ಅಂದರೆ ಬೇಸಿಗೆ ಸಮಯದಲ್ಲಿ ಕಾರಿನ ಒಳಗಡೆ ಪೆಟ್ರೋಲ್, ಲೈಟರ್, ಪರ್ಫ್ಯೂಮ್ ಬಾಟಲಿಗಳನ್ನು ತೆರೆದ ಜಾಗದಲ್ಲಿರಿಸಬೇಡಿ. ಲೈಟರ್‌ಗಳ ಬದಲು ಬೆಂಕಿಪೊಟ್ಟಣಗಳನ್ನು ಬಳಸಿ. ಪರ್ಫ್ಯೂಮ್‌ಗಳನ್ನು ಬಟ್ಟೆಯಲ್ಲಿಸುತ್ತಿ ಬ್ಯಾಗಿನ ಒಳಗಿಡಿ. ಏಕೆಂದರೆ ಹಸಿರುಮನೆಯ ಪರಿಣಾಮದ ಬಗ್ಗೆ ನಿಮಗೆ ಮತ್ತು ನನಗೆ ಗೊತ್ತೇ ಹೊರತು ಕಾರಿಗೆ ಗೊತ್ತಿಲ್ಲ.

**- ದಿವಾಕರ ಶೆಟ್ಟಿ ಎಚ್**, ಮಂಗಳೂರು

# ಹಣದ ಹರಿವು

ಹೊರಹೋಗುವ ಸುಲಭ ದಾರಿಗಳು, ಒಳಬರುವ ಕಠಿಣ ಹಾದಿಗಳು ಖರ್ಚು ಮಾಡುವ ಸುಲಭ ಮಾರ್ಗಗಳು, ಸಂಪಾದನೆ ಮಾಡಲು ಕಠಿಣ ಹಾದಿಗಳು. ಆಧುನಿಕತೆ-ಜಾಗತೀಕರಣದ ಬಹುದೊಡ್ಡ ಪರಿಣಾಮವೆಂದರೆ, ಇರುವ ಹಣವನ್ನು ಅತ್ಯಂತ ಸುಲಭವಾಗಿ, ಸುಲಲಿತವಾಗಿ-ಸರಳವಾಗಿ ಕುಳಿತಲ್ಲಿಂದಲೇ ಹೇಗೆ ಬೇಕಾದರೂ, ಯಾರು ಬೇಕಾದರೂ ಹಣ ಖರ್ಚು ಮಾಡಬಹುದು. ನಮಗೆ ಬೇಕಾದ ವಸ್ತುಗಳನ್ನು, ಹೂಡಿಕೆಯನ್ನು, ಪಾವತಿಗಳನ್ನು, ವರ್ಗಾವಣೆಯನ್ನು ಮಾಡಬಹುದು ಮತ್ತು ಕೊಳ್ಳಬಹುದು. ಇದಕ್ಕೆ ಯಾವುದೇ ಶ್ರಮ ಬೇಕಿಲ್ಲ. ಒಂದು ಮೊಬೈಲಿನ ಮೂಲಕವೇ ಕೋಟ್ಯಾಂತರ ಹಣ ಖರ್ಚು ಮಾಡಬಹುದು. ಅದಕ್ಕಾಗಿ ಎಲ್ಲಾ ಬಗೆಯ ವೇದಿಕೆ - ಅವಕಾಶ - ಮೂಲ ಸೌಕರ್ಯ ಅಭಿವೃದ್ಧಿ ಪಡಿಸಲಾಗಿದೆ. ಹಣ ನಮ್ಮ ಬಳಿ ಇರಬೇಕಷ್ಟೇ.

ಆದರೆ ಅದಕ್ಕೆ ವಿರುದ್ಧವಾಗಿ ಹಣ ಸಂಪಾದನೆಯ ಮಾರ್ಗಗಳ ಬಗ್ಗೆ ಒಮ್ಮೆ ಯೋಚಿಸಿ ನೋಡಿ. ಇಷ್ಟು ಸುಲಭವಾಗಿ, ಸರಳವಾಗಿ, ಯಾವುದೇ ಒತ್ತಡವಿಲ್ಲದೇ ಹಣವನ್ನು ಸಂಪಾದನೆ ಮಾಡಲು ಸಾಧ್ಯವೇ. ಹೌದು, ಕೆಲವು ಅಪರೂಪದ ಜೂಜಿನಂತಹ ಸ್ವಲ್ಪ ಅಪಾಯಕಾರಿ ಟ್ರೇಡಿಂಗ್ ವ್ಯವಹಾರ ಹೊರತುಪಡಿಸಿ ಇತರೇ ವಹಿವಾಟು ಮಾಡಲು ಸಾಧ್ಯವೇ? ಬಹುಶಃ ಇಂದು ನಮ್ಮೆಲ್ಲರ ಬಹುದೊಡ್ಡ ಸವಾಲು ಇದೇ ಆಗಿದೆ. ಸಂಪಾದನೆ ಮತ್ತು ಲಾಭಗಳು ಕಡಿಮೆಯಾಗುತ್ತಾ, ಖರ್ಚುಗಳು ಹೆಚ್ಚಾಗುತ್ತಾ ಅವುಗಳ ನಡುವೆ ಹೊಂದಾಣಿಕೆ ಸಾಧ್ಯವಾಗುತ್ತಿಲ್ಲ. ಇದು ದಿನೇ ದಿನೇ ಅಧಿಕವಾಗುತ್ತಿದೆ.

ಹಾಗೇ ಒಮ್ಮೆ 30 ವರ್ಷಗಳ ಹಿಂದಿನಜನಜೀವನದ ಬಗ್ಗೆ ಯೋಚಿಸಿ. ಮೊಬೈಲ್ ಇರಲಿಲ್ಲ. ಅದರ ಖರ್ಚು ಸಂಪೂರ್ಣ ಉಳಿತಾಯ. ಇಂದು ಅದು ಅನಿವಾರ್ಯ. ಟಿವಿ ಪ್ರಸಾರ ಉಚಿತವಾಗಿತ್ತು. ಬಟ್ಟೆಗಳು ಹಬ್ಬದ ಸಂದರ್ಭದಲ್ಲಿ ಮಾತ್ರ. ಸರ್ಕಾರಿ ಶಾಲೆಗಳಲ್ಲಿ ಅತ್ಯಂತ ಕಡಿಮೆ ದುಡ್ಡು. ಸಾಮಾನ್ಯ ಖಾಯಿಲೆಗೆ ಸರ್ಕಾರಿ ಆಸ್ಪತ್ರೆಗಳೇ ಸಾಕಾಗಿದ್ದವು. ನೀರಿಗೆ ಬಿಲ್ ಇರಲಿಲ್ಲ. ಹುಟ್ಟಿದ ಹಬ್ಬ, ಮದುವೆ ವಾರ್ಷಿಕೋತ್ಸವದ ನೆನಪುಗಳೇ ಇರುತ್ತಿರಲಿಲ್ಲ. ಮನೆಯ ಊಟವೇ ಹೆಚ್ಚು. ಹೋಟೆಲ್ ಮತ್ತು ಇತರ ಬೀದಿ ಬದಿಯ ತಿಂಡಿಗಳು ಅಪರೂಪ. ಫ್ರಿಡ್ಜ್, ವಾಶಿಂಗ್ ಮಿಷಿನ್, ವ್ಯಾಕ್ಯೂಮ್ ಕ್ಲೀನರ್, ಎಸಿ, ವೆಹಿಕಲ್ ಮುಂತಾದವುಗಳ ಅವಶ್ಯಕತೆಯೇ ಇರಲಿಲ್ಲ. ಹೀಗೇ ದಿನೇ ದಿನೇ ನಮ್ಮ ಅವಶ್ಯಕತೆಗಳು ಹೆಚ್ಚಾಗುತ್ತಲೇ ಇವೆ ಮತ್ತು ಅದನ್ನು ಮನೆ ಬಾಗಿಲಿಗೆ ಸಾಲದ ರೂಪದಲ್ಲಿ ಪೂರೈಸಲಾಗುತ್ತದೆ.

ಆದರೆ ಸರ್ಕಾರಿ ಅಧಿಕಾರಿಗಳು ಮತ್ತು ಕೆಲವೇ ನಿರ್ದಿಷ್ಟ ಕ್ಷೇತ್ರಗಳನ್ನು ಹೊರತುಪಡಿಸಿ ಬಹುತೇಕ ಮಧ್ಯಮ ವರ್ಗದ ಜನರ ವ್ಯಾಪಾರ ವಹಿವಾಟುಗಳ ಲಾಭದ ಪ್ರಮಾಣದಲ್ಲಿ ಸ್ಪರ್ಧೆಯ ಕಾರಣದಿಂದಾಗಿ ಕಡಿಮೆ ಆಗುತ್ತಲೇ ಇದೆ, ಜೊತೆಗೆ ಬೇರೆ ಬೇರೆ ಅನಿವಾರ್ಯ ಖರ್ಚುಗಳು ಅದಕ್ಕೆ ಜೊತೆಯಾಗುತ್ತಿದೆ. ಹೊರ ಹೋಗುವುದು ದೊಡ್ಡ ಪ್ರಮಾಣದ ಹಣ - ಒಳ ಬರುವುದು ಚಿಲ್ಲರೆ ಹಣ ಎಂಬಂತಾಗಿದೆ. ಆದರೆ ಬೃಹತ್ ಉದ್ದಿಮೆಗಳಿಗೆ ಇದು ತದ್ವಿರುದ್ಧವಾಗಿ ಅಪಾರ ಲಾಭವನ್ನು ತಂದುಕೊಡುತ್ತಿದೆ.

ಅಂದರೆ ಖರ್ಚುಗಳನ್ನು ಹೆಚ್ಚು ಮಾಡಿ ಆ ಹಣವನ್ನು ಕೆಲವೇ ವ್ಯಕ್ತಿಗಳು ಮತ್ತು ಕಂಪನಿಗಳು ಕೇಂದ್ರೀಕೃತ ಮಾಡಿಕೊಂಡು ಜನರ ಆರ್ಥಿಕ ಅಸಮಾನತೆಗೆ ಕಾರಣವಾಗಿ, ಅದೇ ಅಂಶಗಳು ಅವರ ಒಟ್ಟು ಜೀವನಮಟ್ಟ ಕುಸಿಯುವಂತೆ ಮಾಡಿವೆ. ಮಾನಸಿಕ ಮತ್ತು ದೈಹಿಕ ಅಸಹಿಷ್ಣತೆ ಉಂಟಾಗಿ ರೋಗಗಳ ಗೂಡಾಗುವಂತೆ ಮಾಡಿದೆ. ಒಂದು ಅಧ್ಯಯನದ ಪ್ರಕಾರ ಕುಟುಂಬವೊಂದು ಭಾರತದಲ್ಲಿ ಅತಿಹೆಚ್ಚು ಹಣ ಖರ್ಚು ಮಾಡುವುದು ಶಿಕ್ಷಣ ಮತ್ತು ಆರೋಗ್ಯಕ್ಕೆ. ನೋಡಿ ಇದು ನಮ್ಮ ನೇರ ಅರಿವಿಗೆ ಬಾರದೆ




ಪರೋಕ್ಷವಾಗಿ ನಮ್ಮ ಜೇಬುಗಳಿಗೆ ಕತ್ತರಿ ಬೀಳುತ್ತಿದೆ.

ಇತ್ತೀಚಿನ ಹಬ್ಬದ ಸಂದರ್ಭದಲ್ಲಿ ಜನರ ವಿವಿಧ ರೀತಿಯ ಪರದಾಟಗಳನ್ನು ನೋಡಿದಾಗ ಇದೆಲ್ಲಾ ಮನದ ಮೂಲೆಯಲ್ಲಿ ನೆನಪಾಗುತ್ತಿದೆ. ಅಭಿವೃದ್ಧಿ ಎಂಬುದು ನಮ್ಮ ಬದುಕಿನ ನೆಮ್ಮದಿಯನ್ನು ನಾಶ ಮಾಡುತ್ತಾ, ಮೇಲ್ನೋಟಕ್ಕೆ ನಮ್ಮನ್ನು ವಸ್ತು ಸಂಸ್ಕೃತಿಯ ಶ್ರೀಮಂತರಂತೆ ಬಿಂಬಿಸುತ್ತಾ, ಕೊನೆಗೆ ಜೀವನದ ಬಗ್ಗೆಯೇ ಜಿಗುಪ್ಸೆ ಮೂಡುವಂತೆ ಮಾಡುತ್ತದೆ. ನಮ್ಮೆಲ್ಲರ ಕ್ರಿಯಾತ್ಮಕ ಚಟುವಟಿಕೆಗಳನ್ನು ನಾಶ ಮಾಡಿ ಪರೋಕ್ಷ ಗುಲಾಮಿ ಸಂಸ್ಕೃತಿಗೆ ದಾಸರನ್ನಾಗಿ ಮಾಡುತ್ತಿದೆ.

ಬಹುತೇಕ ವಿದ್ಯಾವಂತ ಯುವ ಜನಾಂಗ ಸ್ವಿಗ್ಗಿ, ಅಮೆಜಾನ್, ಫ್ಲಿಪ್ ಕಾರ್ಟ್, ಜೊಮಾಟೋ, ಕಾಲ್ ಸೆಂಟರ್ ಮುಂತಾದ ಕಂಪನಿಗಳಲ್ಲಿ ಪೋಸ್ಟ್ ಮ್ಯಾನ್‌ಗಳ ರೀತಿಯ ಉದ್ಯೋಗಗಳಲ್ಲಿ ಕೇವಲ ಬದುಕುವ ಏಕೈಕ ಉದ್ದೇಶದಿಂದ ತಮ್ಮ ಅಪೂರ್ವ ಶಕ್ತಿಯನ್ನು ವಿನಿಯೋಗಿಸಿದರೆ ಅವರ ಬದುಕಿನ ಸಾರ್ಥಕತೆ ಮತ್ತು ದೇಶದ ಭವಿಷ್ಯದ ಉತ್ಪಾದನಾ ಸಾಮರ್ಥ್ಯ ಏನಾಗಬಹುದು. ಆದ್ದರಿಂದ ಕೇವಲ ಹೊಟ್ಟೆಪಾಡಿನ ಉದ್ಯೋಗ ಮಾತ್ರ ಅಭಿವೃದ್ಧಿಯಲ್ಲ. ಮನುಷ್ಯನ ಆಸೆ ಆಕಾಂಕ್ಷೆಗಳು, ಕನಸುಗಳು, ಕ್ರಿಯಾತ್ಮಕ ಸಾಧನೆಗಳು ಮತ್ತು ನೆಮ್ಮದಿಯ ಮಟ್ಟ ಹೆಚ್ಚಿ ತೃಪ್ತಿದಾಯಕ ಬದುಕು ನಮ್ಮದಾಗುವಂತ ಸಮಾಜ ನಮ್ಮದಾಗಲಿ ಎಂದು ಈ ಸಂದರ್ಭದಲ್ಲಿ ಆಶಿಸುತ್ತಾ...

**- ವಿವೇಕಾನಂದ ಎಚ್. ಕೆ.**

## ಇಂಡೋನೇಷ್ಯಾದಲ್ಲಿ ದೋಣಿ ಮಗುಚಿ 127 ಮಂದಿ ನಾಪತ್ತೆ: 110 ಜನರ ರಕ್ಷಣೆ

**ಜಕಾರ್ತ:** ಇಂಡೋನೇಷ್ಯಾದ ಜಾವಾ ಸಮುದ್ರದಲ್ಲಿ ಪ್ರಯಾಣಿಕರ ದೋಣಿ ಯೊಂದು ಮಗುಚಿದ ಪರಿಣಾಮ 127 ಜನರು ನಾಪತ್ತೆಯಾಗಿದ್ದು ಹಲವರನ್ನು ರಕ್ಷಿಸಲಾಗಿದೆ. ಶನಿವಾರ ತಡ ರಾತ್ರಿ ಈ ಘಟನೆ ನಡೆದಿದೆ.

240 ಮಂದಿ ಇದ್ದ ಪ್ರಯಾಣಿಕರ ದೋಣಿಯೊಂದು ಪ್ರತಿಕೂಲ ಹವಾಮಾನ ದಿಂದಾಗಿ ಮುಳುಗಿದ್ದು ಅದರಲ್ಲಿದ್ದ 127 ಮಂದಿ ಕಾಣೆಯಾಗಿದ್ದಾರೆ. ಈವರೆಗೆ 110 ಮಂದಿಯನ್ನು ರಕ್ಷಿಸಲಾಗಿದ್ದು, ಮೂವರ ಮೃತದೇಹ ಪತ್ತೆಯಾಗಿದೆ.

ಪೂರ್ವ ಜಾವಾದಿಂದ ಸೌತ್ ಕಾಲಿ ಮಂಟನ್ ಪ್ರಾಂತ್ಯಕ್ಕೆ ದೋಣಿ ಪ್ರಯಾಣಿಸುತ್ತಿತ್ತು ಎಂದು ಇಂಡೋನೇಷ್ಯಾದ ಅಧಿ ಕಾರಿಗಳು ಮಾಹಿತಿ ನೀಡಿದ್ದಾರೆ. ಇಲ್ಲಿಯವರೆಗೂ ಮೂವರ ಮೃತ ದೇಹಗಳು ಪತ್ತೆಯಾಗಿದ್ದು ನಾಪತ್ತೆಯಾಗಿರುವವರಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಸಮುದ್ರದಲ್ಲಿ ದೋಣಿ ಪ್ರಯಾಣಿಸುವಾಗ ಜೋರಾಗಿ ಗಾಳಿ ಬೀಸಿದ್ದರಿಂದ ಅಲೆಗಳ ಪ್ರಮಾಣ ತೀವ್ರವಾಯಿತು. ಸುಮಾರು 10 ಅಡಿ ಎತ್ತರದ ಅಲೆಗಳ ಮಧ್ಯೆ ದೋಣಿ ಸಾಗುತ್ತಿದ್ದು ಪ್ರಕ್ಷುಬ್ಧ ಸ್ಥಿತಿ ಇದೆ ಎಂದು ದೋಣಿ ಮಗುಚುವ ಮುನ್ನ ಅದರ ಕ್ಯಾಪ್ಟನ್ ವರದಿ ಮಾಡಿದ್ದರು. ತಕ್ಷಣಕ್ಕೆ ಶೋಧ ಮತ್ತು ರಕ್ಷಣಾ ಕಚೇರಿಯು ರಕ್ಷಣಾ ಪಡೆಗಳನ್ನು ರವಾನಿಸಿದ ಕೆಲವೇ ನಿಮಿಷಗಳಲ್ಲಿ ದೋಣಿ ಮಗುಚಿರುವ ಮಾಹಿತಿ ಸಿಕ್ಕಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಕೆಎಸ್‌ಆರ್‌ಟಿಸಿಗೆ 7 ಸಾವಿರ ಕೋ.ರೂ. ಮಂಜೂರು

### 2028ಕ್ಕೂ ಕಾಂಗ್ರೆಸ್‌ಗೆ ಅಧಿಕಾರ | ಸಾರಿಗೆ ಸಚಿವ ಬೈರತಿ ಸುರೇಶ್

• ಪ್ರಜೋದಯ ವರದಿ



**ಮಂಡ್ಯ:** ರಾಜ್ಯ ಸರ್ಕಾರದಿಂದ ಸಾರಿಗೆ ಇಲಾಖೆಗೆ 7 ಸಾವಿರ ಕೋ.ರೂ. ಅನುದಾನ ಮಂಜೂರು ಮಾಡಲಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ಅವರು ತಿಳಿಸಿದ್ದಾರೆ.

ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಕನ್ನಾಘಟ್ಟ ಗ್ರಾಮದಲ್ಲಿ ನಡೆದ ಮಹಾ ಗಣಪತಿ ಪ್ರತಿಷ್ಠಾಪನಾ ಮಹೋತ್ಸವ ಮತ್ತು ನೂತನ ದೇವಾಲಯದ ಲೋಕಾರ್ಪಣಾ ಸಮಾ ರಂಭದಲ್ಲಿ ಮಾತನಾಡಿ, ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಸಾರಿಗೆ ಇಲಾಖೆಯ ಅಭಿವೃದ್ಧಿಗೆ ಹೆಚ್ಚಿನ ಆಸಕ್ತಿ ತೋರಿದ್ದಾರೆ. ಈ ಹಿನ್ನಲೆಯಲ್ಲಿ ನಮ್ಮ ಇಲಾಖೆಗೆ ಒಟ್ಟು 7 ಸಾವಿರ ಕೋ.ರೂ. ಅನುದಾನ ವನ್ನು ನೀಡಲು ಮುಖ್ಯ ಮಂತ್ರಿ ಅನುಮೋದನೆ ನೀಡಿದ್ದಾರೆ. ಜೊತೆಗೆ 1 ಸಾವಿರ ಬಸ್ ಖರೀದಿ ಮಾಡಲು ಹಸಿರು ನಿಶಾನೆ ತೋರಿದ್ದು, ರಾಜ್ಯದ ಬಸ್ ನಿಲ್ದಾಣಗಳ ಉನ್ನತೀ ಕರಣಕ್ಕೆ ಕೇಂದ್ರ ಸರ್ಕಾರದಿಂದ 2 ಸಾವಿರ ಕೋ.ರೂ. ಪಡೆಯಲೂ ಸಮ್ಮತಿ ಸೂಚಿಸಿರುವುದು ಸಂತಸದ ವಿಚಾರವಾಗಿದೆಂದು ತಿಳಿಸಿದರು.

**ಗ್ಯಾರಂಟಿಗೆ 76 ಸಾವಿರ ಕೋ. ರೂ.**

ಸಿದ್ದರಾಮಯ್ಯ ಅವರು 2023ರಲ್ಲಿ ಮುಖ್ಯ ಮಂತ್ರಿಯಾಗಿ ಅಧಿಕಾರಕ್ಕೆ ಬಂದ ತಕ್ಷಣ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು. ಅದರ ಶ್ರೇಯಸ್ಸು ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ. ಈಗಿನ ಮುಖ್ಯಮಂತ್ರಿ ಶಿವಕುಮಾರ್ ಅವರು ಯೋಜನೆಗಳನ್ನು ಮುಂದುವರಿಸಿದ್ದು, ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್ ಪಾಸ್ ನೀಡುವ ಮತ್ತೊಂದು ಯೋಜನೆಯನ್ನು ಪ್ರಕಟಿಸಿ ಜನಮಾನಸದಲ್ಲಿ ಉಳಿಯುವಂತಹ ಕೆಲಸ ಮಾಡುತ್ತಿದ್ದಾರೆಂದು ಬಣ್ಣಿಸಿದರು.

ರಾಜ್ಯದಲ್ಲಿ ಸುಮಾರು 50 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲಾಗುತ್ತಿದೆ. ಅದಕ್ಕಾಗಿ ಸಾರಿಗೆ ಸಂಸ್ಥೆಗಳಿಗೆ ವಾರ್ಷಿಕ ಸುಮಾರು 350 ಕೋ.ರೂ. ವೆಚ್ಚವಾಗುತ್ತದೆ. ಇದು ಸಾರಿಗೆ ಸಂಸ್ಥೆ ಗಳಿಗೆ ಹೊರೆಯಾಗುತ್ತದೆ ಎಂಬುದನ್ನು ಮನಗಂಡಿ ರುವ ಮುಖ್ಯಮಂತ್ರಿ ಈ ಹಣವನ್ನು ಸರ್ಕಾರ ನೀಡಲಿದೆಂದು ಭರವಸೆ ನೀಡಿದ್ದಾರೆಂದು ತಿಳಿಸಿದರು.

ಉಚಿತ ಬಸ್ ಪ್ರಯಾಣದ ಶಕ್ತಿ, 10 ಕೆಜಿ ಉಚಿತ ಅಕ್ಕಿ, 2 ಸಾವಿರ ರೂಪಾಯಿ ಪ್ರೋತ್ಸಾಹಧನ ಮತ್ತು ನಿರುದ್ಯೋಗಿಗಳಿಗೆ 3 ಸಾವಿರ ರೂ. ನೀಡುತ್ತಿದ್ದೇವೆ. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 76 ಸಾವಿರ ಕೋ.ರೂ. ವ್ಯಯಿಸುತ್ತಿದೆ. ಹೀಗೆ ಕಳೆದ 3 ವರ್ಷದಿಂದ 1.68 ಲ.ಕೋ. ರೂಪಾಯಿ ರಾಜ್ಯದ ಜನರಿಗೆ ಉಚಿತವಾಗಿ ನೀಡಿದೆ ಎಂದರು.

ಮಂಡ್ಯ ಜಿಲ್ಲೆಗೆ ಹೊಸದಾಗಿ 40 ಬಸ್‌ಗಳನ್ನು ಮಂಜೂರು ಮಾಡುವಂತೆ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಅವರು ಮನವಿ ಸಲ್ಲಿಸಿದ್ದಾರೆ. ಆದರೆ, ಜಿಲ್ಲೆಗೆ 100 ಬಸ್ ನೀಡಲಾಗುವುದು. ಮುಂದಿನ 15-20 ದಿನಗಳೊಳಗಾಗಿ ಈ ಬಸ್‌ಗಳ ಸಂಚಾರವನ್ನು ಆರಂಭಿಸಲಾಗುವುದೆಂದು ಭರವಸೆ ನೀಡಿದರು.

2028ಕ್ಕೂ ನಮ್ಮ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರುತ್ತದೆ. ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂಬುದನ್ನು 2033ಕ್ಕೆ ನೋಡೋಣ. 2028ಕ್ಕಂತೂ ನಮ್ಮದೇ ಸರ್ಕಾರ ಬರಲಿದೆ. ಆಗ ಇನ್ನಷ್ಟು ಸೌಲಭ್ಯಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

**ಶ್ರೀಮಠದಿಂದ ಸಮಪಾಲು ಸಮಬಾಳು**

ಆದಿಚುಂಚನಗಿರಿ ಪುಣ್ಯಕ್ಷೇತ್ರವು ಕೇವಲ ಒಕ್ಕಲಿಗ ಸಮುದಾಯದ ಹಿತವನ್ನಷ್ಟೇ ಕಾಯು ತ್ತಿಲ್ಲ. ಪ್ರತಿಯೊಂದು ಸಮುದಾಯದವರನ್ನೂ ಒಂದೇ ರೀತಿಯಲ್ಲಿ ಪರಿಗಣಿಸುತ್ತಿದೆ. ಅದರ ಪರಿಣಾಮವಾಗಿ ಪ್ರತಿ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಶ್ರೀಮಠದಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಈ ಮೂಲಕ ಶ್ರೀಮಠವು ಕುವೆಂಪುರವರು ಸಾರಿದ ಸಮ ಪಾಲು, ಸಮಬಾಳು, ಸರ್ವಜನಾಂಗದ ಶಾಂತಿಯ ತೋಟ ಎಂಬ ಸಂದೇಶವನ್ನು ಮಠದಲ್ಲಿ ಚಾಚೂ ತಪ್ಪದೇ ಪಾಲಿಸುತ್ತಿದೆ ಎಂದುಮೆಚ್ಚುಗೆ ಸೂಚಿಸಿದರು.

# ಸಚಿವ ಸತೀಶ್ ಜಾರಕಿಹೊಳಿ ರಾಜೀನಾಮೆ ನೀಡಲಿ

• ಪ್ರಜೋದಯ ವರದಿ



**ಹುಬ್ಬಳ್ಳಿ:** ಜಾರಿ ನಿರ್ದೇಶನಾಲಯ (ಇ.ಡಿ) ನಡೆಸಿದ ದಾಳಿಯಲ್ಲಿ ಸಚಿವ ಸತೀಶ್ ಜಾರಕಿ ಹೊಳಿ ಹಾಗು ಅವರಿಗೆ ಸಂಬಂಧಿಸಿದವರ ಆಸ್ತಿ, ಹೂಡಿಕೆ ಮತ್ತು ವ್ಯವಹಾರದ ಬಗ್ಗೆ ಸಾಕಷ್ಟು ಮಾಹಿತಿಗಳು ಬಹಿರಂಗವಾಗಿದ್ದು, ತನಿಖೆ ಪೂರ್ಣಗೊಳ್ಳುವವರೆಗೆ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿ, ಸತೀಶ್ ಜಾರಕಿಹೊಳಿ ಹಾಗು ಅವರಿಗೆ ಸಂಬಂಧಿಸಿದ ಸುಮಾರು 18 ಸ್ಥಳಗಳಲ್ಲಿ ಇಡಿ ಶೋಧ ನಡೆಸಿ, 3 ಕೋ.ರೂ.ಗೂ ಹೆಚ್ಚು ನಗದು ಹಾಗು ವಿದೇಶಿ ಕರೆನ್ಸಿ ಪತ್ತೆಯಾಗಿರುವ ಕುರಿತು ಮಾಹಿತಿ ನೀಡಿದೆ. ಸಚಿವರ ಕುಟುಂಬ ದವರು ವಿದೇಶಿ ಕಂಪನಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡಿರುವ ವಿಚಾರವೂ ಬೆಳಕಿಗೆ ಬಂದಿದೆ ಎಂದು ತಿಳಿಸಿದರು.

ಸಚಿವ ಜಾರಕಿಹೊಳಿ ಅವರು ಲೋಕೋಪಯೋಗಿ ಇಲಾಖೆಯ ನಿಯಮ ಉಲ್ಲಂಘಿಸಿ ಕಂಪನಿ ಯೊಂದಕ್ಕೆ 2,477 ಕೋ.ರೂ. ಮೊತ್ತದ ಟೆಂಡರ್ ನೀಡಿರುವ ಆರೋಪವಿದೆ. ಟೆಂಡರ್ ನೀಡುವಲ್ಲಿ ಕಿಕ್‌ಬ್ಯಾಕ್ ನಡೆದಿದೆಯೇ, ಯಾರಿಗಾದರೂ ಹಣ ಅಥವಾ ಅನುಕೂಲ ಕಲ್ಪಿಸಲಾಗಿ ದೆಯೇ ಎನ್ನುವ ಕುರಿತು ತನಿಖೆಯಾಗಬೇಕೆಂದು ಬೆಲ್ಲದ ಆಗ್ರಹಿಸಿದರು.

ಲೋಕೋಪಯೋಗಿ ಇಲಾಖೆಯ ಮುಖ್ಯಸ್ಥರು ಸಚಿವರೇ ಆಗಿರುವುದರಿಂದ, ತನಿಖೆ ನಡೆಯುವಾಗ ಅವರು ಆ ಸ್ಥಾನದಲ್ಲಿ ಇರುವುದು ಸರಿಯಲ್ಲ. ನಿರ್ದೋಷಿ ಎಂದು ಸಾಬೀ ತಾದರೆ, ಮತ್ತೆ ಸಚಿವರಾಗಲಿ. ದೋಷಿಯೆಂದು ಸಾಬೀತಾದರೆ ಶಿಕ್ಷೆಯಾಗಬೇಕು. ಹಿಂದೆ ಜಾರ್ಜ್ ಫರ್ನಾಂಡಿಸ್ ಅವರ ಮೇಲೆ ಆರೋಪ ಬಂದಾಗ ಸ್ವಯಂ ಪ್ರೇರಿತರಾಗಿ ರಾಜೀನಾಮೆ ನೀಡಿದ್ದರು. ತನಿಖೆಯಲ್ಲಿ ಆರೋಪ ಸಾಬೀತಾಗದ ಕಾರಣ ಮತ್ತೆ ಸಚಿವರಾಗಿದ್ದರೆಂದು ಹೇಳಿದರು.

ಬರ ಪರಿಸ್ಥಿತಿ ಹಾಗು ಕಸ್ತೂರಿ ರಂಗನ್ ವರದಿ ಕುರಿತು ಚರ್ಚಿಸಲು ಕನಿಷ್ಟ 10 ದಿನಗಳ ವಿಶೇಷ ಅಧಿವೇಶನ ಕರೆಯಬೇಕು. ಆದರೆ ರಾಜ್ಯ ಸರ್ಕಾರ ಕೇವಲ ಮೂರು ದಿನದ ಅಧಿ ವೇಶನ ಕರೆದಿರುವುದು ಸರಿಯಲ್ಲ. ಸರಿಯಾಗಿ ಸಮೀಕ್ಷೆ ನಡೆಸದೆ ಬರಪೀಡಿತ ತಾಲ್ಲೂಕುಗಳನ್ನು ಘೋಷಿಸಲಾಗಿದೆ. ಮಳೆ ಕೊರತೆಯಿಂದ ಸಾಕಷ್ಟು ಭಾಗದ ರೈತರು ಸಂಕಷ್ಟದಲ್ಲಿದ್ದಾರೆ. ಕಸ್ತೂರಿ ರಂಗನ್ ವರದಿಯ ಅನುಷ್ಠಾನದಿಂದ ಪಶ್ಚಿಮಘಟ್ಟ ಹಾಗು ಮಲೆನಾಡಿನ ಜನರ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಯಿದೆ. ಸಾಧಕ-ಬಾಧಕಗಳ ಕುರಿತು ಸುದೀರ್ಘ ಚರ್ಚೆ ನಡೆಸುವ ಅಗತ್ಯ ವಿದೆ ಎಂದು ಶಾಸಕ ಬೆಲ್ಲದ ಹೇಳಿದರು.

ಕೆಪಿಎಸ್‌ಸಿ ನೇಮಕಾತಿ ಅಕ್ರಮ ಪ್ರಕರಣದಲ್ಲೂ ಇಬ್ಬರು ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಪ್ರಕರಣ ಮುಗಿಸಬಾರದು. ಅಧಿಕಾರಿಗಳು, ರಾಜಕೀಯ ವ್ಯಕ್ತಿಗಳು ಹಾಗೂ ಸಚಿವರ ವಿರುದ್ಧದ ಆರೋಪಗಳನ್ನೂ ಪರಿಶೀಲಿಸಬೇಕೆಂದರು.

# ಬದುಕಿನ ಮಜಲುಗಳ ಪರಿಚಯಿಸುವ ಬಿಂಬ-ಪ್ರತಿಬಿಂಬ

• ಪ್ರಜೋದಯ ವರದಿ




**ಹಾಸನ:** ಕವಿ ರಾಜಣ್ಣ ರಾಶಿ ಅವರ ಬಿಂಬ-ಪ್ರತಿಬಿಂಬ ಕವನ ಸಂಕಲನದಲ್ಲಿ ಪ್ರಕೃತಿ, ವೃತ್ತಿ ಬದುಕು, ಕೌಟುಂಬಿಕ ಸಂಬಂಧ, ಪ್ರೀತಿ-ಪ್ರೇಮ ಸೇರಿ ಬದುಕಿನ ಹಲವು ಮಜಲುಗಳು ವಿಭಿನ್ನ ನೆಲೆಯಲ್ಲಿ ಅನಾವರಣಗೊಂಡಿವೆ ಎಂದು ಸಾಹಿತಿ ಗೊರೂರು ಅನಂತ ರಾಜು ಅವರು ಅಭಿಪ್ರಾಯಪಟ್ಟರು.

ನಗರದ ಸೆಂಟ್ರಲ್ ಕಾಮರ್ಸ್ ಕಾಲೇಜಿನಲ್ಲಿ ಮನೆ ಮನೆ ಕವಿಗೋಷ್ಠಿ ಸಾಹಿತ್ಯ ಸಂಘಟನೆ ವತಿಯಿಂದ ಆಯೋಜಿಸಿದ್ದ 345ನೇ ತಿಂಗಳ ಕಾರ್ಯಕ್ರಮದಲ್ಲಿ ಬಿಂಬ-ಪ್ರತಿಬಿಂಬ ಕವನ ಸಂಕಲನ ಕುರಿತು ಮಾತನಾಡಿದರು.

ಕವಿ ರಾಜಣ್ಣ ರಾಶಿ ಅವರು ತಾವು ಹುಟ್ಟಿ ಬೆಳೆದ ಪರಿಸರ, ಬದುಕಿನ ಅನುಭವಗಳು ಹಾಗು ಸುತ್ತಮುತ್ತಲಿನ ಘಟನೆಗಳನ್ನು ಕಾವ್ಯದ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಮುಳ್ಳಯ್ಯನಗಿರಿಯ ಪ್ರಕೃತಿ ಸೌಂದರ್ಯವನ್ನು ಕಾವ್ಯದಲ್ಲಿ ಸೆರೆ ಹಿಡಿದಿರುವ ಅವರು, ಹೇಮಾವತಿ ನದಿಯನ್ನು ರೈತರ ಬದುಕಿನ ಆಶ್ರಯ ದಾತೆಯಾಗಿ ಕಂಡು ಅದರ ಮಹತ್ವವನ್ನು ಕಾವ್ಯಾತ್ಮಕವಾಗಿ ಬಿಂಬಿಸಿದ್ದಾರೆಂದರು.

ಮಹಾರಾಷ್ಟ್ರದಲ್ಲಿ ಇಂಜಿನೀಯರ್ ಆಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಕಂಡ ಅನುಭವಗಳು ಕೂಡ ಕವಿಯ ಕಾವ್ಯಕ್ಕೆ ವಿಶಿಷ್ಟ ಆಯಾಮ ನೀಡಿವೆ. ವರದಾ ನದಿ ಯೋಜನೆ ಹಾಗು ಪುನರ್ವಸತಿ ಕಾರ್ಯದ ವೇಳೆ ನಿರಾಶ್ರಿತರ ನೋವು, ಸಂಕಷ್ಟಗಳನ್ನು ಕಣ್ಣಾರೆ ಕಂಡ ಅನುಭವಗಳನ್ನು ಕವಿ ಕಾವ್ಯದ ಮೂಲಕ ದಾಖಲಿಸಿರುವುದು ಗಮನಾರ್ಹ ಎಂದರು.

ಇಂಗ್ಲಿಷ್ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿರುವ ರಾಜಣ್ಣ ರಾಶಿ ಅವರು ಪ್ರವಾಸಿ ತಾಣಗಳು, ಗಿರಿ ಶಿಖರಗಳ ಸೌಂದರ್ಯ, ದೇವಾಲಯ, ತಂದೆ-ತಾಯಿಯ ವಾತ್ಸಲ್ಯ ಹಾಗು ಅತ್ತೆಯ ಮಮತೆ ಸೇರಿ ತಮ್ಮ ಬದುಕಿನ ಹಲವು ಅನುಭವಗಳನ್ನು ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆಂದು ಹೇಳಿದರು.

ಒಂದು ವಿಷಯ ಬಿಂಬವಾಗಿ ಕವಿಯ ಮನಸ್ಸಿನಲ್ಲಿ ಮೂಡಿದಾಗ ಅದರಿಂದ ಹುಟ್ಟುವ ಹತ್ತಾರು ಭಾವನೆಗಳು ಪ್ರತಿಬಿಂಬವಾಗಿ ಕವಿತೆಯ ರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಇದೇ ಕವನ ಸಂಕಲನದ ಶೀರ್ಷಿಕೆಯ ಆಶಯಕ್ಕೂ ಅರ್ಥಪೂರ್ಣತೆಯನ್ನು ನೀಡುತ್ತದೆ. ಕಾವ್ಯ ರಚನೆಯಲ್ಲಿ ಭಾಷೆ, ಛಂದಸ್ಸು ಮತ್ತು ಪ್ರಾಸಬದ್ಧತೆಯ ಸಾಂಪ್ರದಾಯಿಕ ಒತ್ತಡದಿಂದ ಹೊರ ಬಂದು ಸರಳ ಹಾಗು ಸಹಜ ಭಾಷೆಯನ್ನು ಕವಿ ಅಳವಡಿಸಿಕೊಂಡಿದ್ದಾರೆ. ಕೆಲವು ಕವಿತೆಗಳಲ್ಲಿ ಸಮಾಜದ ಜ್ವಲಂತ ಸಮಸ್ಯೆಗಳು ಪ್ರತಿಫಲಿಸಿದ್ದರೆ ಮತ್ತಷ್ಟು ಕವಿತೆಗಳಲ್ಲಿ ಕೋಮಲ ಮನಸ್ಸಿನ ನಿಷ್ಕಲ್ಮಶ ಪ್ರೀತಿ, ಪ್ರೇಮ ಹಾಗು ಶೃಂಗಾರ ಭಾವನೆಗಳು ಅಭಿವ್ಯಕ್ತಗೊಂಡಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿ.ಎನ್. ತಿಮ್ಮೇಗೌಡ, ಎಸ್.ಲಲಿತ, ಹೆಚ್.ಎನ್.ಭಾರತಿ, ಚಂದ್ರಕಾಂತ ಪಡೇಸೂರ, ಎನ್.ಎಲ್.ಚನ್ನೇಗೌಡ, ಕೃತಿಕಾರ ಟಿ. ಶಂಕರಪ್ಪ (ರಾಜಣ್ಣ ರಾಶಿ), ಕುಮಾರ್ ಛಲವಾದಿ ಮತ್ತಿತರರಿದ್ದರು.

# ಚ.ರಾ.ಪಟ್ಟಣದಲ್ಲಿ ಭಗವತ್ಗೀತಾ ಬೋಧನ ಗಣಪ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಗಣೇಶ ಚತುರ್ಥಿ ಸಲುವಾಗಿ ಪಟ್ಟಣದ ಕಲಾವಿದ ಪ್ರಸನ್ನರವರ ಕೈಚಳಕದಲ್ಲಿ ನೂರಾರು ರೀತಿಯ ವಿವಿಧ ಕಲಾಕೃತಿಯ ಗಣಪ ಮೂರ್ತಿಗಳು ಸಿದ್ದಗೊಂಡು ಮಾರಾಟಕ್ಕೆ ಸಿದ್ದವಾಗಿರುವುದರ ಜೊತೆಗೆ ಪೆಂಡಾಲಿನಲ್ಲಿ ಪ್ರತಿಷ್ಠಾಪನೆಗೊಳ್ಳಲು 9 ಅಡಿ ಎತ್ತರದ ಭಗವತ್ಗೀತಾ ಭೋದನ ಗಣಪನನ್ನು ಅತ್ಯಾಕರ್ಷಕವಾಗಿ ರೂಪಗೊಳಿಸಲಾಗಿದೆ.

ಆಕರ್ಷಕ, ಉತ್ತಮ ರೀತಯಲ್ಲಿ ಮೂರ್ತಿ ತಯಾರಿಸುವ ಸಲುವಾಗಿ ಪ್ರತಿವರ್ಷ ಕೇವಲ 400 ಮೂರ್ತಿಗಳನ್ನಷ್ಟೇ ತಯಾರಿಸುವ ಕಲಾವಿದ ಪ್ರಸನ್ನ ಅತ್ಯಂತ ಮನಮೋಹಕ, ಸುಂದರ ವಾದ ಮೂರ್ತಿಗಳನ್ನು ಸಿದ್ದಗೊಳಿಸಿದ್ದಾರೆ. ಕಳೆದ 18 ವರ್ಷಗಳಿಂದ ಪಟ್ಟಣದಲ್ಲಿನ ಗಣಪತಿ ಸೇವಾಸಮಿತಿಗೆ ಮೂರ್ತಿ ತಯಾರಿಸುತ್ತಾ ಬಂದಿರುವ ಅವರು ಪ್ರತಿ ಬಾರಿ ವಿಶೇಷ ರೂಪಕದ ಗಣಪತಿ ತಯಾರಿಸುವ ಮೂಲಕ ತಾಲ್ಲೂಕಿನ ಜನರ ಮೆಚ್ಚುಗೆ ಪಾತ್ರರಾಗುತ್ತಿದ್ದಾರೆ. ಈ ಬಾರಿಯೂ ಕೂಡ 9 ಅಡಿ ಎತ್ತರದ ಭಗವತ್ಗೀತೆ ಭೋದಿಸುವ ಗಣಪನನ್ನು ನಿರ್ಮಿಸಿ ಅಕ್ಕಪಕ್ಕದಲ್ಲಿ ಕೃಷ್ಣಾರ್ಜುನರನ್ನು ಪ್ರತಿಷ್ಠಾಪಿಸುವ ಮೂಲಕ ಗಣಪತಿಯನ್ನು ವಿಶೇಷ ಆಸಕ್ತಿಯಿಂದ ತಯಾರಿಸಿ ಅಂತಿಮ ರೂಪ ನೀಡುತ್ತಿದ್ದಾರೆ.

ಕಲಾವಿದ ಪ್ರಸನ್ನ ಕಳೆದ 40 ವರ್ಷಗಳಿಂದ ಗೌರಿ-ಗಣೇಶ ಮೂರ್ತಿಗಳನ್ನು ಗಣೇಶ ಚತುರ್ಥಿಗೆಂದು ಸಿದ್ದಗೊಳಿಸುವ ಕಾಯಕವನ್ನು ತಂದೆಯಿಂದ ಬಳುವಳಿಯಾಗಿ ಪಡೆದು ಶ್ರದ್ಧೆ, ಪ್ರಮಾಣಿಕತೆಯಿಂದ ಮಾಡಿಕೊಂಡು ಬಂದಿದ್ದಾರೆ. ಪ್ರತಿ ವರ್ಷ ಎರಡು ಸಾವಿರದಷ್ಟು ಮೂರ್ತಿಗಳನ್ನು ಸಿದ್ದಗೊಳಿಸುತ್ತಿದ್ದ ಅವರು ಕಾರ್ಮಿಕರ ಸಮಸ್ಯೆಯ ಕಾರಣ ಮತ್ತು ಗುಣ ಮಟ್ಟದ ಸಲುವಾಗಿ ಸಂಖ್ಯೆಗೆ ಕಡಿವಾಣ ಹಾಕಿ, ಮುಂಚಿತವಾಗಿ ಆರ್ಡರ್ ಕೊಟ್ಟವರಿಗಷ್ಟೇ ಗಣೇಶ ಮೂರ್ತಿಗಳನ್ನು ಮಾಡುತ್ತಿದ್ದಾರೆ. ಅವರ ಕೈಚಳಕದಲ್ಲಿ ಅರಳಿದ ಮೂರ್ತಿಗಳು ಆದಿಚುಂಚನಗಿರಿ ಮಠ, ಕಾಡಸಿದ್ದೇಶ್ವರ ಮಠ, ಬೇಲಗೂರು ಆಂಜನೇಯ ಸ್ವಾಮಿ ಸಮಿತಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೆಗೌಡರ ಕುಟುಂಬಗಳಲ್ಲಿ ಪೂಜಿಸಲ್ಪಡುವುದು ವಿಶೇಷ.

ಈಗಾಗಲೇ ತಯಾರಿಸಿರುವ ಮೂರ್ತಿಗಳನ್ನು ಅಕ್ಕಪಕ್ಕದ ಗ್ರಾಮಗಳಿಂದ, ನೆರೆಹೊರೆಯ ತಾಲ್ಲೂಕುಗಳಿಂದ ಆಗಮಿಸಿದ ಭಕ್ತರು ತಮ್ಮಗಿಷ್ಟವಾದ ಮೂರ್ತಿಯನ್ನು ಆಯ್ಕೆ ಮಾಡಿಕೊಂಡು, ಮುಂಗಡ ಹಣ ಕೊಟ್ಟು ಕಾಯ್ದಿರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಈ ಕುರಿತಾಗಿ ಮಾತನಾಡಿದ ಕಲಾವಿದ ಪ್ರಸನ್ನ ಹಬ್ಬ ಇನ್ನೂ ಮೂರು ತಿಂಗಳು ಇರುವಾಗಲೇ ತಾಲ್ಲೂಕಿನ ದೊಡ್ಡೇರಿ ಕೆರೆಯಿಂದ ಮಣ್ಣು ತಂದು ಹದಗೊಳಿಸಿ ಮೂರ್ತಿ ತಯಾರಿಕೆಗೆ ಸಿದ್ಧವಾಗುತ್ತೇವೆ, ಈ ಬಾರಿ ಕಡಿಮೆ ಮೂರ್ತಿ ಮಾಡಲಾಗಿದೆ. ಈ ಬಾರಿ ಮೂರ್ತಿಗೆ ಬೇಡಿಕೆ ಇದ್ದರೂ ಹೆಚ್ಚಿನ ಸಂಖ್ಯೆಯಲ್ಲಿಸಿದ್ದಗೊಳಿಸಲಾಗಿಲ್ಲ, ಭಕ್ತ ಸಮೂಹ ಪರಿಸರ ಉಳಿಸುವ ದೃಷ್ಠಿಯಿಂದ ಮಣ್ಣಿನಲ್ಲಿ ನಿರ್ಮಾಣ ವಾದ ಗಣೇಶ ಮೂರ್ತಿಯನ್ನಿಟ್ಟು ಪೂಜಿಸಬೇಕು, ಪಿಓಪಿ ಗಣೇಶ ಮೂರ್ತಿಗೆ ಕಡಿವಾಣ ಹಾಕುವಂತೆ ವಿನಿಂತಿಸಿದರು.

## 15.18 ಲಕ್ಷ ಕೊಳವೆ ಬಾವಿ, ಕೆರೆಗಳ ದಾಖಲೀಕರಣ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಏಳನೇ ಸಣ್ಣ ನೀರಾವರಿ ಗಣತಿ ಮತ್ತು ಎರಡನೇ ಜಲಮೂಲಗಳ ಗಣತಿ ಕ್ಷೇತ್ರ ಕಾರ್ಯವನ್ನು ಪೂರ್ಣಗೊಳಿಸಲಾಗಿದ್ದು, ಒಟ್ಟು 15.18 ಲಕ್ಷ ಜಲಮೂಲಗಳನ್ನು ದಾಖಲಿಸಲಾಗಿದೆ ಎಂದು ಸಣ್ಣ ನೀರಾವರಿ ಸಚಿವ ಅಜಯ್ ಸಿಂಗ್ ತಿಳಿಸಿದ್ದಾರೆ.

ರಾಜ್ಯದ ಜಲಸಂಪನ್ಮೂಲಗಳ ವಾಸ್ತವ ಸ್ಥಿತಿಯನ್ನು ಅರಿತು, ಭವಿಷ್ಯದ ನೀರಾವರಿ ಹಾಗೂ ಜಲ ಸಂರಕ್ಷಣಾ ಯೋಜನೆಗಳನ್ನು ವೈಜ್ಞಾನಿಕವಾಗಿ ರೂಪಿಸಲು ಈ ಗಣತಿ ಮಹತ್ವದ್ದಾಗಿತ್ತು. ರಾಜ್ಯದ 30,671 ಗ್ರಾಮಗಳು, 300 ನಗರ ಸ್ಥಳೀಯ ಸಂಸ್ಥೆಗಳು ಹಾಗೂ 7,128 ನಗರ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಗಣತಿ ನಡೆಸಲಾಗಿತ್ತು ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಕ್ಷೇತ್ರ ಕಾರ್ಯದ ವೇಳೆ 14.18 ಲಕ್ಷ ಕೊಳವೆ ಬಾವಿಗಳು, 77,573 ನೀರಾವರಿ ಯೋಜನೆಗಳು ಮತ್ತು 38,960 ಜಲಮೂಲಗಳನ್ನು ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

# ಹೊಳೆನರಸೀಪುರದಲ್ಲಿ ಅದ್ದೂರಿ ಗಣೇಶೋತ್ಸವಕ್ಕೆ ಸಿದ್ಧತೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ಗಣೇಶೋತ್ಸವಕ್ಕೆ ತಾಲ್ಲೂಕಿನಾದ್ಯಂತ ಭರದ ಸಿದ್ಧತೆ ನಡೆದಿದ್ದು, ಪಟ್ಟಣದ ಪೆಂಡಾಲ್ ಗಣಪತಿ ಪ್ರತಿಷ್ಠಾಪನೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಕೇರಳಾಪುರದ ಕಲಾವಿದ ಚಂದ್ರಚಾರ್ ಅವರು ಕಳೆದ ಒಂದು ತಿಂಗಳಿಂದ ಗಣೇಶನ ಮೂರ್ತಿಯನ್ನು ನಿರ್ಮಿಸಿದ್ದು, ಶನಿವಾರ ಗಣೇಶನ ಮೂರ್ತಿಗೆ ಅಂತಿಮ ರೂಪ ನೀಡಿ ಬಣ್ಣ ಹಚ್ಚುವ ಕಾರ್ಯ ನಡೆಯಿತು. ಈ ಸಂದರ್ಭದಲ್ಲಿ ಗಣೇಶೋತ್ಸವ ಸೇವಾ ಸಮಿತಿ ಕಾರ್ಯಾಧ್ಯಕ್ಷ ಹೆಚ್.ಎಸ್.ಪುಟ್ಟಸೋಮಪ್ಪ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿ ಕಲಾವಿದರಿಗೆ ಅಗತ್ಯ ಸಲಹೆ-ಸೂಚನೆ ನೀಡಿದರು.

ಅ.14ರಂದು ಆರಂಭವಾಗುವ ಗಣೇಶೋತ್ಸವ ಅ.17ರ ವರೆಗೆ ನಡೆಯಲಿದೆ. ಉತ್ಸವದ ಅಂಗವಾಗಿ ಪ್ರತಿ ದಿನ ಸಂಜೆ ಸಂಗೀತ, ನೃತ್ಯ, ನಾಟಕ, ಹರಿಕಥೆ, ಆರ್ಕೆಸ್ಟ್ರಾ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಪ್ರತಿದಿನ ಮಧ್ಯಾಹ್ನ 1 ಗಂಟೆಗೆ ಮಹಾ ಮಂಗಳಾರತಿ, ತೀರ್ಥ-ಪ್ರಸಾದ ವಿನಿಯೋಗ ಹಾಗು ಸೇವಾರ್ಥದಾರರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ.

ಸೇವಾ ಕಾರ್ಯಕ್ರಮದಲ್ಲಿ ಭಾಗ ವಹಿಸಲು ಇಚ್ಚಿಸುವವರು ಸಮಿತಿಯವರಲ್ಲಿ ನಿಗದಿತ ಸೇವಾ ಶುಲ್ಕ ಪಾವತಿಸಿ ಹೆಸರು ನೋಂದಾಯಿಸಿಕೊಳ್ಳುವಂತೆ ಸಮಿತಿ ತಿಳಿಸಿದೆ.

**10 ಸಾವಿರ ಮಂದಿಗೆ ಅನ್ನಸಂತರ್ಪಣೆ**

ಉತ್ಸವದ ಅವಧಿಯಲ್ಲಿ ಒಂದು ದಿನ ಲೋಕಕಲ್ಯಾಣಾರ್ಥವಾಗಿ ಮಹಾ ಗಣಪತಿ ಹೋಮ ಹಾಗು 10 ಸಾವಿರಕ್ಕೂ ಅಧಿಕ ಜನರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗುವುದು ಎಂದು ಸೇವಾ ಸಮಿತಿಯ ಕಾರ್ಯಾಧ್ಯಕ್ಷ ಹೆಚ್.ಎಸ್.ಪುಟ್ಟಸೋಮಪ್ಪ ಅವರು ತಿಳಿಸಿದ್ದಾರೆ.

ಅ.17ರಂದು ಗಣೇಶನನ್ನು ಪೆಂಡಾಲ್‌ನಿಂದ ಎತ್ತಿ ವಿದ್ಯುತ್ ದೀಪಾಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಿ, ವಿವಿಧ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆ ಸಲಾಗುವುದು. ಬಳಿಕ ಅ.18ರಂದು ಮಧ್ಯಾಹ್ನ 3 ಗಂಟೆ ವೇಳೆಗೆ ಹೇಮಾವತಿ ನದಿಯಲ್ಲಿ ತೆಪ್ಪೋತ್ಸವ ನಡೆಸಿ ಗಣೇಶ ಮೂರ್ತಿಯನ್ನು ವಿಸರ್ಜಿಸಲಾಗುವುದೆಂದರು.

ಇನ್ನೊಂದೆಡೆ, ಸೋಮವಾರ ಗಣೇಶ ಹಬ್ಬ ನಡೆಯಲಿರುವ ಹಿನ್ನಲೆಯಲ್ಲಿ ಪಟ್ಟಣದ ಪ್ರಮುಖ ರಸ್ತೆಗಳು ಹಾಗು ವೃತ್ತಗಳಲ್ಲಿ ಹಣ್ಣು, ತರಕಾರಿ, ಬಳೆ ಮತ್ತು ಅಲಂಕಾರಿಕ ವಸ್ತು ಗಳನ್ನು ಮಾರಾಟ ಮಾಡುವ ತಳ್ಳುಗಾಡಿಗಳು ಸಾಲುಗಟ್ಟಿ ನಿಲ್ಲುತ್ತಿರುವುದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದೆ.

ನಗರ ಠಾಣೆಯ ಎಸ್‌ಐ ರಮೇಶ್ ಅವರು ಮೇಲಿಂದ ಮೇಲೆ ಗಸ್ತು ತಿರುಗಿ ರಸ್ತೆ ತೆರವುಗೊಳಿಸುವಂತೆ ಸೂಚಿಸುತ್ತಿದ್ದರೂ ಕೆಲ ವ್ಯಾಪಾರಿಗಳು ಗಾಡಿಗಳನ್ನು ತೆರವುಗೊಳಿಸದ ಹಿನ್ನಲೆಯಲ್ಲಿ ಸಂಚಾರ ಸಮಸ್ಯೆ ಉಂಟಾಗಿದೆ. ಸಂಬಂಧಪಟ್ಟವರು ತಕ್ಷಣ ಕ್ರಮ ಕೈಗೊಂಡು ಸಾರ್ವಜನಿಕರು ಹಾಗು ವಾಹನಗಳ ಸುಗಮ ಓಡಾಟಕ್ಕೆ ಅನುವುಮಾಡಿಕೊಡಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ಪಟ್ಟಣದ ಬಯಲು ರಂಗ ಮಂದಿರದ ಆವರಣದಲ್ಲಿ ಗೌರಿ-ಗಣೇಶ ಮೂರ್ತಿಗಳ ಮಾರಾಟ ಕ್ಕಾಗಿ ಹತ್ತಾರು ಅಂಗಡಿಗಳನ್ನು ತೆರೆಯಲಾಗಿದೆ. ವಿವಿಧ ಬಗೆಯ, ಬಣ್ಣ ಹಾಗು ಆಕಾರಗಳ ಸಾವಿರಾರು ಗಣೇಶ ಮೂರ್ತಿಗಳನ್ನು ಮಾರಾಟಕ್ಕೆ ಇಡಲಾಗಿದ್ದು, ಸಾರ್ವಜನಿಕರು ಮೂರ್ತಿಗಳ ಖರೀದಿಯಲ್ಲಿ ತೊಡಗಿದ್ದಾರೆ.

# ಸಹಕಾರ ಕ್ಷೇತ್ರ, ಡೇರಿ ಬೆಳೆಯಲು ದೇವೇಗೌಡರೇ ಕಾರಣ

• ಪ್ರಜೋದಯ ವರದಿ




**ಚನ್ನರಾಯಪಟ್ಟಣ:** ಜಿಲ್ಲೆಯಲ್ಲಿ ಡೇರಿ ಉದ್ಯಮ ಮತ್ತು ಸಹಕಾರ ಕ್ಷೇತ್ರ ಬೃಹತ್‌ಕಾರವಾಗಿ ಬೆಳೆಯಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರೇ ಕಾರಣರಾಗಿದ್ದು, ಅವರು ನೀಡಿದ ಶಕ್ತಿಯಿಂದಲೇ 350 ಕೋಟಿ ರೂ.ಗೂ ಹೆಚ್ಚು ಸಾಲವನ್ನು ಸಹಕಾರಿ ರಂಗದಲ್ಲಿ ನೀಡಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿ ಎ.ಚೋಳೇನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ 2025-26ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಹಿತ ಕಾಯಲು ವಿಫಲವಾಗಿದ್ದ ಜಿಲ್ಲಾ ಸಹಕಾರ ಬ್ಯಾಂಕ್‌ನ ಪುನಶ್ಚೇತನಕ್ಕೆ ಮಾಜಿ ಪ್ರಧಾನಿ ದೇವೇಗೌಡರು ರೂಪಿಸಿದ ಪೈಲೆಟ್ ಯೋಜನೆಯಿಂದಾಗಿ ಮತ್ತು ಹೆಚ್.ಡಿ.ರೇವಣ್ಣನವರ ಕಾರ್ಯವೈಖರಿ ಫಲ ಇಂದು ಬ್ಯಾಂಕ್ 1ಸಾವಿರ ಕೋಟಿಗೂ ಹೆಚ್ಚು ಠೇವಣಿ ಹೊಂದಿದೆ. ಪ್ರಸಕ್ತ ವರ್ಷ 15 ಕೋಟಿ ರೂ. ಲಾಭ ಗಳಿಸಿದೆ. ಸಾವಿರಾರು ಕೋಟಿ ರೂ.ಗಳ ಸಾಲವನ್ನು ಜಿಲ್ಲೆಯ ರೈತರಿಗೆ ನೀಡಲಾಗಿದೆ ಎಂದರು.

ತಾವು ಜಿಲ್ಲಾ ಸಹಕಾರಿ ಬ್ಯಾಂಕ್‌ನ ನಿರ್ದೇಶಕರಾಗುವ ಮುಂಚೆ 7 ಸಾವಿರ ರೈತರಿಗೆ 35 ಕೋಟಿ ರೂ. ಸಾಲ ನೀಡಲಾಗಿತ್ತು. ಇದೀಗ 53 ಸಾವಿರ ರೈತರಿಗೆ 350 ಕೋಟಿ ರೂ. ಗಳಷ್ಟು ಸಾಲ ನೀಡಲಾಗಿದೆ. ಎ. ಚೋಳೇನಹಳ್ಳಿ ಸೊಸೈಟಿಯಲ್ಲಿ 1,291 ಸದಸ್ಯರಿಗೆ 8 ಕೋಟಿ 43 ಲಕ್ಷ ರೂ. ಕೆಸಿಸಿ ಸಾಲ, ಹೈನುಗಾರಿಕೆಗಾಗಿ 56 ಲಕ್ಷ ರೂ., ಸ್ತ್ರೀಶಕ್ತಿ ಸಂಘಗಳಿಗೆ 36 ಲಕ್ಷ ರೂ., ಮಧ್ಯಮಾವಧಿ ಸಾಲ 4.5 ಕೋಟಿ ರೂ. ಸೇರಿ 15 ಕೋಟಿ ರೂ. ಗಳಷ್ಟು ಸಾಲ ನೀಡಲಾಗಿದೆ. ಪ್ರಸಕ್ತ ಸಾಲಿಗೆ ಸೊಸೈಟಿ 6 ಲಕ್ಷ ಲಾಭಂಶ ಗಳಿಸಿದೆ. ತಾಲ್ಲೂಕಿನ ಸಹಕಾರ ರಂಗ ಗಟ್ಟಿಗೊಳ್ಳಲು ಸಾಕಷ್ಟು ಶ್ರಮಿಸಿದ್ದು, ಸಾಲಕ್ಕಾಗಿ ಅರ್ಜಿ ಹಿಡಿದು ಬಂದವರಿಗೆಲ್ಲಾ ಪಕ್ಷಬೇಧ ಮಾಡದೇ ಸಾಲ ನೀಡಲಾಗಿದೆ ಎಂದರು.

ಸಂಘದ ಅಧ್ಯಕ್ಷ ಎ.ಎಂ.ಮಧು ಅವರು ಮಾತನಾಡಿ, ಸೊಸೈಟಿಯ ಅಭಿವೃದ್ಧಿಗೆ ಮತ್ತು ರೈತರ ಕಷ್ಟಗಳಿಗೆ ನೆರಳಾಗಿ ನಿಂತವರು ಶಾಸಕ ಬಾಲಕೃಷ್ಣರವರು, ತಾವು ಅಧ್ಯಕ್ಷರಾದ ಮೇಲೆ 60 ಲಕ್ಷ ರೂ.ಗಳ ಅನುದಾನ ಕೊಡಿಸಿ ರೈತರಿಗೆ ಸಾಲ ನೀಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ಹೆಚ್ಚುವರಿ ಸಾಲಕ್ಕಾಗಿ ಮತ್ತಷ್ಟು ಅನುದಾನ ನೀಡವಂತೆ ಮನವಿಮಾಡಿರುವುದಾಗಿ ಹೇಳಿದರು.

ರಾಜ್ಯ ಮಾರಾಟ ಮಹಾ ಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಉಪಾಧ್ಯಕ್ಷ ರವಿ, ನಿರ್ದೇಶಕರಾದ ಧರ್ಮೇಗೌಡ, ದಿನೇಶ್, ಸಿ.ಬಿ.ಅಂಬರೀಶ್, ಶ್ರೀಮತಿ ಲಲಿತ ಎ.ಆರ್. ನಾರಾಯಣ್, ಶ್ರೀಮತಿ ಆಶಾರಾಣಿ, ಎನ್.ವೈ.ಪ್ರದೀಪ್‌ಕುಮಾರ್, ಶ್ರೀಮತಿ ಪ್ರತಿಭಾ, ಕ್ಷೇತ್ರಾಧಿಕಾರಿ ಎಸ್.ಆರ್.ಮಧು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ನಂಜುಂಡೇಗೌಡ, ಮುಖಂಡ ಅಡಗೂರು ನಾರಾಯಣ ಸೇರಿ ಬ್ಯಾಂಕ್‌ನ ಸಿಬ್ಬಂದಿ ಇದ್ದರು.

# ಬರದ ನಡುವೆಯೂ ಗೌರಿ-ಗಣೇಶ ಹಬ್ಬದ ಸಂಭ್ರಮ

### ಖರೀದಿಗೆ ಮುಗಿಬಿದ್ದ ಜನತೆ

• ಪ್ರಜೋದಯ ವರದಿ

**ಅರಕಲಗೂಡು:** ಬರದ ಛಾಯೆಯ ನಡುವೆಯೂ ಗೌರಿ-ಗಣೇಶ ಹಬ್ಬದ ಸಂಭ್ರಮಕ್ಕೆ ಯಾವುದೇ ಕೊರತೆ ಯಾಗಲಿಲ್ಲ. ಪಟ್ಟಣದಲ್ಲಿ ಹಬ್ಬದ ಅಂಗವಾಗಿ ಹೂವು, ಹಣ್ಣು, ಬಾಗಿನ ಸಾಮಗ್ರಿಗಳು ಹಾಗೂ ಗಣೇಶ-ಗೌರಿ ಮೂರ್ತಿಗಳ ಖರೀದಿಗೆ ಭಾನುವಾರ ಜನರು ಮುಗಿಬಿದ್ದ ದೃಶ್ಯ ಕಂಡುಬಂದಿತು.

ಪಟ್ಟಣದ ವಿವಿಧೆಡೆ ಹಬ್ಬದ ಸಾಮಗ್ರಿಗಳ ಅಂಗಡಿಗಳು ಹಾಗೂ ತಾತ್ಕಾಲಿಕ ಮಳಿಗೆಗಳು ತೆರೆದಿದ್ದು, ಬೆಳಿಗ್ಗೆಯಿಂದಲೇ ಜನರು ಖರೀದಿಯಲ್ಲಿ ತೊಡಗಿಸಿಕೊಂಡಿದ್ದರು. ಹೂವು, ಹಣ್ಣು, ಬಾಗಿನ ಸಾಮಗ್ರಿಗಳ ಜೊತೆಗೆ ವಿವಿಧ ವಿನ್ಯಾಸದ ಗಣೇಶ ಹಾಗೂ ಗೌರಿ ಮೂರ್ತಿಗಳು ಗ್ರಾಹಕರನ್ನು ಆಕರ್ಷಿಸಿದವು.

ಮಾರಾಟಕ್ಕೆ ಇಡಲಾಗಿದ್ದ ಗಣೇಶ ಮೂರ್ತಿಗಳ ಬೆಲೆ ಗಾತ್ರ ಹಾಗೂ ವಿನ್ಯಾಸಕ್ಕೆ ಅನುಗುಣವಾಗಿ 100 ರೂ.ರಿಂದ 50 ಸಾವಿರದವರೆಗೆ ಇತ್ತು. ಬೆಲೆ ಏರಿಕೆಯ ನಡುವೆಯೂ ಭಕ್ತರು ತಮ್ಮ ಇಷ್ಟದ ಮೂರ್ತಿಗಳನ್ನು ಖರೀದಿಸುತ್ತಿರುವುದು ಕಂಡುಬಂದಿತು.

ಹಬ್ಬದ ಪ್ರಮುಖ ಸಾಮಗ್ರಿಗಳಾದ ಹೂವಿನ ಬೆಲೆ ಸುಮಾರು 100 ರೂ.,, ಬಾಗಿನ ಸೆಟ್‌ಗಳು 50 ರೂ., ಬಾಳೆಹಣ್ಣು ಕೆಜಿಗೆ 100 ರೂ., ಸೇಬು ಸೇರಿ ಇತರೆ ಹಣ್ಣುಗಳು 100 ರಿಂದ 200 ರೂ. ವರೆಗೆ ಮಾರಾಟವಾಗುತ್ತಿದ್ದವು.

ಬರ ಪರಿಸ್ಥಿತಿ ಹಾಗೂ ಬೆಲೆ ಏರಿಕೆಯ ನಡುವೆಯೂ ಜನರು ಹಬ್ಬದ ಸಂಭ್ರಮಕ್ಕೆ ಸಿದ್ಧತೆ ನಡೆಸಿದ್ದು ವಿಶೇಷವಾಗಿತ್ತು. ಮನೆಗಳಲ್ಲಿ ಗೌರಿ-ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಸಂಭ್ರಮದಿಂದ ಹಬ್ಬ ಆಚರಿಸಲು ಅಗತ್ಯ ವಸ್ತುಗಳ ಖರೀದಿಗೆ ಜನರು ಉತ್ಸಾಹ ತೋರಿದರು.

ಒಟ್ಟಿನಲ್ಲಿ ಬರದ ಸಂಕಷ್ಟದ ನಡುವೆಯೂ ಗೌರಿ-ಗಣೇಶ ಹಬ್ಬದ ಸಂಭ್ರಮಕ್ಕೆ ಜನರ ಉತ್ಸಾಹದಲ್ಲಿ ಯಾವುದೇ ಕಡಿಮೆಯಾಗಿರಲಿಲ್ಲ.



### ವ್ಯಾಪಾರಿಗಳ ಅತಿಕ್ರಮಣದಿಂದ ಪಟ್ಟಣದಲ್ಲಿ ಸಂಚಾರ ಅಸ್ತವ್ಯಸ್ತ

# ಹಬ್ಬದ ಹೆಸರಿನಲ್ಲಿ ರಸ್ತೆಯೇ ಮಾರುಕಟ್ಟೆ

• ಪ್ರಜೋದಯ ವರದಿ




**ಬೇಲೂರು:** ಗೌರಿ-ಗಣೇಶ ಹಬ್ಬದ ಹಿನ್ನಲೆಯಲ್ಲಿ ಪಟ್ಟಣದ ಪ್ರಮುಖ ರಸ್ತೆಗಳು ವ್ಯಾಪಾರಿಗಳ ಅತಿಕ್ರಮಣದಿಂದ ಅಸ್ತವ್ಯಸ್ತಗೊಂಡಿದ್ದು, ವಾಹನ ಸವಾರರು, ಪಾದಚಾರಿಗಳು ಹಾಗೂ ಪ್ರವಾಸಿಗರು ತೊಂದರೆ ಅನುಭವಿಸುವಂತಾಗಿದೆ.

ಹಬ್ಬದ ವಸ್ತುಗಳು, ಹಣ್ಣು, ತರಕಾರಿ ಸೇರಿ ವಿವಿಧ ಸಾಮಗ್ರಿಗಳ ಮಾರಾಟಕ್ಕೆ ರಸ್ತೆ ಬದಿ ಮಾತ್ರವಲ್ಲದೆ, ರಸ್ತೆಯ ಮೇಲೆಯೇ ಅಂಗಡಿಗಳನ್ನು ಹಾಕಿರುವ ಪರಿಣಾಮ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದೆ. ಒಂದೆಡೆ ವ್ಯಾಪಾರಿಗಳ ಅಂಗಡಿಗಳು, ಮತ್ತೊಂದೆಡೆ ರಸ್ತೆ ಬದಿಯಲ್ಲಿ ನಿಲ್ಲಿಸಿರುವ ದ್ವಿಚಕ್ರ ವಾಹನಗಳು, ಇದರ ನಡುವೆ ಕಾರು, ಆಟೋ, ಬಸ್ ಹಾಗೂ ಸರಕು ಸಾಗಣೆ ವಾಹನಗಳ ಸಂಚಾರದಿಂದ ಪಟ್ಟಣದ ಪ್ರಮುಖ ರಸ್ತೆಗಳು ಕಿರಿದಾಗಿವೆ.

ಪಟ್ಟಣದಲ್ಲಿ ಜನದಟ್ಟಣೆ ಹೆಚ್ಚಾಗುವುದನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳು ಒಂದು ವಾರದ ಹಿಂದೆಯೇ ಜೂನಿಯರ್ ಕಾಲೇಜು ಮೈದಾನದ ಒಂದು ಭಾಗದಲ್ಲಿ ಸಂತೆಯನ್ನು ನಡೆಸುವಂತೆ ವ್ಯಾಪಾರಿಗಳಿಗೆ ಮನವಿ ಮಾಡಿದ್ದರು ಜೊತೆಗೆ ದಿನಪತ್ರಿಕೆಗಳಲ್ಲಿ ಕೂಡ ಪ್ರಕಟಗೊಂಡಿದ್ದು, ಅಧಿಕಾರಿಗಳ ಮನವಿಯನ್ನು ಲೆಕ್ಕಿಸದೆ ಮತ್ತೆ ರಸ್ತೆಯಲ್ಲೇ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

**ಅಧಿಕಾರಿಗಳ ಕೈ ಕಟ್ಟಿಹಾಕಿರುವವರು ಯಾರು**

ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆ ಕಾಪಾಡಬೇಕಾದ ಅಧಿಕಾರಿಗಳು ಸಮಸ್ಯೆಯ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದರೂ, ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸಾಧ್ಯವಾಗದಿರು ವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಅಧಿಕಾರಿಗಳ ಕೈ ಕಟ್ಟಿಹಾಕಿರುವವರು ಯಾರು ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಹಬ್ಬದ ದಿನಗಳಲ್ಲಿ ಬೇಲೂರಿಗೆ ಪ್ರವಾಸಿಗರು ಸೇರಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿ ಸುವ ಹಿನ್ನಲೆಯಲ್ಲಿ ಈಗಾಗಲೇ ವಾಹನ ಹಾಗೂ ಜನದಟ್ಟಣೆ ಹೆಚ್ಚಾಗಿದೆ. ಇಂತಹ ಸಂದರ್ಭ ದಲ್ಲಿ ರಸ್ತೆಯನ್ನೇ ವ್ಯಾಪಾರಕ್ಕೆ ಬಳಸುತ್ತಿರುವುದರಿಂದ ಕ್ಷಣದಲ್ಲಿ ಅಪಘಾತ ಸಂಭವಿಸುವ ಸಾಧ್ಯತೆ ಇದೆ.

**ಅಪಘಾತ ಸಂಭವಿಸಿದಾಗ ಹೊಣೆ ಯಾರು**

ಜನಜಂಗುಳಿಯ ನಡುವೆ ಅಪಘಾತ ಸಂಭವಿಸಿದರೆ ಅದರ ಹೊಣೆ ಯಾರು ಹೊರುತ್ತಾ ರೆಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. ಅಧಿಕಾರಿಗಳ ಮೇಲೆ ಯಾವುದೇ ರೀತಿಯ ಒತ್ತಡವಿ ದ್ದರೂ, ಸಾರ್ವಜನಿಕರ ಜೀವ ಮತ್ತು ಸುರಕ್ಷತೆಯ ವಿಚಾರದಲ್ಲಿ ರಾಜಿ ಮಾಡಿಕೊಳ್ಳಬಾರದೆಂದು ಆಗ್ರಹಿಸಿದ್ದಾರೆ.

ಅಧಿಕಾರಿಗಳ ಕೈ ಕಟ್ಟಿಹಾಕಿರುವವರು ಯಾರು ಎಂಬುದು ಗೊತ್ತಿಲ್ಲ. ಆದರೆ ಅಪಘಾತಗಳು ಸಂಭವಿಸಿದಾಗ ಅಧಿಕಾರಿಗಳ ಪರವಾಗಿ ನಿಲ್ಲಲು ಯಾರೂ ಬರುವುದಿಲ್ಲ. ಅನಾಹುತ ಸಂಭ ವಿಸಿದ ನಂತರ ಅದರ ಹೊಣೆಗಾರಿಕೆಯನ್ನು ಅಧಿಕಾರಿಗಳೇ ಎದುರಿಸಬೇಕಾಗುತ್ತದೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳು ಈಗಲೇ ಗಮನದಲ್ಲಿಟ್ಟುಕೊಳ್ಳಬೇಕೆಂದು ಸಾರ್ವಜನಿಕರು ಮಾತನಾಡಿಕೊಂಡಿದ್ದಾರೆ.

ವ್ಯಾಪಾರಿಗಳಿಗೆ ಸೂಕ್ತ ಸ್ಥಳ ಕಲ್ಪಿಸುವುದರ ಜೊತೆಗೆ ಸಾರ್ವಜನಿಕರ ಸಂಚಾರಕ್ಕೆ ಅಡಚಣೆಯಾಗದಂತೆ ಕ್ರಮ ಕೈಗೊಳ್ಳುವುದು ಜಿಲ್ಲಾಡಳಿತದ ಜವಾಬ್ದಾರಿಯಾಗಿದೆ. ಜೂನಿಯರ್ ಕಾಲೇಜು ಮೈದಾನದಲ್ಲಿ ನಿಗದಿಪಡಿಸಿರುವ ಸ್ಥಳದಲ್ಲೇ ತಾತ್ಕಾಲಿಕ ಸಂತೆಯನ್ನು ನಡೆಸಲು ವ್ಯವಸ್ಥೆ ಕಲ್ಪಿಸಿ, ಪ್ರಮುಖ ರಸ್ತೆಗಳಿಂದ ಅತಿ ಕ್ರಮಣ ತೆರವುಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪೊಲೀಸ್ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳು ಎಚ್ಚೆತ್ತುಕೊಂಡು ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ಸಂಚಾರಕ್ಕೆ ಮುಕ್ತ ಅವಕಾಶ ಕಲ್ಪಿಸಬೇಕು. ಇಲ್ಲವಾದರೆ ಮುಂದೆ ಸಂಭವಿಸಬಹುದಾದ ಯಾವುದೇ ಅನಾಹುತಕ್ಕೆ ಮುನ್ನೆಚ್ಚರಿಕೆ ಇದ್ದರೂ ಕ್ರಮ ಕೈಗೊಳ್ಳದಿರುವುದು ಪ್ರಶ್ನಾರ್ಹವಾಗಲಿದೆ ಎಂಬ ಎಚ್ಚರಿಕೆಯನ್ನು ಸಾರ್ವಜನಿಕರು ನೀಡಿದ್ದಾರೆ.

# ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ

## ಬ್ರಿಕ್ಸ್‌ನಲ್ಲಿ ಒಗ್ಗಟ್ಟಿನ ಮಂತ್ರ: ಭಾರತ-ಚೀನಾ ಬಾಂಧವ್ಯ ವೃದ್ಧಿ ಮಾತುಕತೆ

- ಪಶ್ಚಿಮ ಏಷ್ಯಾ: ಗರಿಷ್ಠ ಸಂಯಮಕ್ಕೆ ಕರೆ
- ಗಾಜಾ ಕದನ ವಿರಾಮಕ್ಕೆ ಒತ್ತು

• ಪ್ರಜೋದಯ ವರದಿ

**ನವದೆಹಲಿ :** ಭಾರತದ ಆತಿಥ್ಯದಲ್ಲಿ ನಡೆಯುತ್ತಿರುವ 18ನೇ ಬ್ರಿಕ್ಸ್ ಶೃಂಗಸಭೆಯ 2ನೇ ದಿನವೂ ಹಲವು ಮಹತ್ವದ ರಾಜತಾಂತ್ರಿಕ ಬೆಳವಣಿಗೆಗಳಿಗೆ ಸಾಕ್ಷಿಯಾಗಿದೆ. ಸೆ.12ರಂದು ಅಂಗೀಕರಿಸಲಾದ ನವದೆಹಲಿ ಘೋಷಣೆಯಲ್ಲಿ ಪಶ್ಚಿಮ ಏಷ್ಯಾದ ಸಂಘರ್ಷ, ಗಾಜಾ, ಪರಮಾಣು ಸುರಕ್ಷತೆ, ಭಯೋತ್ಪಾದನೆ, ಜಾಗತಿಕ ವ್ಯಾಪಾರ, ಸುಂಕ ನೀತಿ ಹಾಗೂ ಜಾಗತಿಕ ಆಡಳಿತ ಸುಧಾರಣೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಸದಸ್ಯ ರಾಷ್ಟ್ರಗಳು ಸಾಮಾನ್ಯ ನಿಲುವು ದಾಖಲಿಸಿವೆ.

ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿ, ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ಜಾಗತಿಕವಾಗಿ ಸಾಮಾನ್ಯ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಈ ಸವಾಲುಗಳನ್ನು ಎದುರಿಸಲು ಮತ್ತು ವಿಶೇಷವಾಗಿ ಜಾಗತಿಕ ದಕ್ಷಿಣದಾದ್ಯಂತ ಸಮಗ್ರ ಬೆಳವಣಿಗೆಯನ್ನು ಹೆಚ್ಚಿಸಲು ಬ್ರಿಕ್ಸ್ ಒಂದಾಗಬೇಕು. ತಂತ್ರಜ್ಞಾನ ಮತ್ತು ನಿರ್ಣಾಯಕ ಖನಿಜಗಳ ಶಸ್ತ್ರಾಸ್ತ್ರೀಕರಣದ ಬಗ್ಗೆ ಗಂಭೀರ ಕಳವಳಗಳನ್ನು ವ್ಯಕ್ತಪಡಿಸಿದ ಅವರು, ಇದು ಹಂಚಿಕೆಯ ಪ್ರಗತಿ ಮತ್ತು ಸಮೃದ್ಧಿಗೆ ಅಡ್ಡಿಯಾಗಬಹುದೆಂದು ಹೇಳಿದರು.

ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಮತ್ತು ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಸೇರಿ ಬ್ರಿಕ್ಸ್ ಗುಂಪಿನ ಉನ್ನತ ನಾಯಕರ ಸಮ್ಮುಖದಲ್ಲಿ ಮೋದಿ ಈ ಹೇಳಿಕೆಗಳನ್ನು ನೀಡಿದರು.

ಸ್ಥಿತಿ ಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆ ಈ ನಾಲ್ಕು ಆಧಾರ ಸ್ತಂಭಗಳತ್ತ ನಾವು ಗಮನವನ್ನು ಕೇಂದ್ರೀಕರಿಸಿದ್ದೇವೆ. ನಿಮ್ಮ ಸಹಕಾರ ಮತ್ತು ಬೆಂಬಲದೊಂದಿಗೆ, ನಮ್ಮ ಹಂಚಿಕೆಯ ದೃಷ್ಟಿಕೋನವನ್ನು ಗೆಲುವು - ಗೆಲುವಿನ ಪರಿಸ್ಥಿತಿಯಾಗಿ ಪರಿವರ್ತಿಸಲು ನಮಗೆ ಸಾಧ್ಯವಾಗಿದೆ ಎಂದರು.

ಪ್ರಪಂಚದಾದ್ಯಂತ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ಮತ್ತು ಅವು ಸಾಮಾನ್ಯ ಜನರ ಜೀವನದ ಮೇಲೆ ಬೀರುವ ಪ್ರಭಾವದ ಬಗ್ಗೆಯೂ ಮೋದಿ ಮಾತನಾಡಿದರು. ಜಗತ್ತು ಹೆಚ್ಚುತ್ತಿರುವ ಉದ್ವಿಗ್ನತೆಗಳನ್ನು ಕಾಣುತ್ತಿದೆ ಮತ್ತು ಅವು ಸಾಮಾನ್ಯ ಜನರ ಜೀವನದ ಮೇಲೆ ಗಮನಾರ್ಹ ನಕಾರಾತ್ಮಕ ಪರಿಣಾಮ ಬೀರುತ್ತಿವೆ ಎಂದರು.

ಸಾಂಕ್ರಾಮಿಕ ರೋಗಗಳು, ಹವಾಮಾನ ವಿಪತ್ತುಗಳು ಮತ್ತು ಪೂರೈಕೆ ಸರಪಳಿ ಅಡಚಣೆಗಳು ಇಂದಿನ ಅಂತರ್ ಸಂಪರ್ಕಿತ ಜಗತ್ತಿನಲ್ಲಿ, ಯಾವುದೇ ಬಿಕ್ಕಟ್ಟು ಒಂದೇ ಪ್ರದೇಶಕ್ಕೆ ಸೀಮಿತವಾಗಿಲ್ಲ ಎಂಬುದನ್ನು ತೋರಿಸಿವೆ. ಆದ್ದರಿಂದ, ಬ್ರಿಕ್ಸ್ ಗುಂಪಿನೊಳಗೆ ಸ್ಥಿತಿ ಸ್ಥಾಪಕತ್ವವನ್ನು ಹೆಚ್ಚಿಸುವತ್ತ ನಾವು ವಿಶೇಷ ಒತ್ತು ನೀಡಿದ್ದೇವೆ. ಸವಾಲುಗಳನ್ನು ಸಕಾಲಿಕ ವಾಗಿ ಗುರುತಿಸುವುದು, ಅವುಗಳಿಗೆ ಸಿದ್ಧರಾಗಿರುವುದು ಮತ್ತು ತಕ್ಷಣದ ಕ್ರಮ ತೆಗೆದು ಕೊಳ್ಳುವುದು ಅಷ್ಟೇ ಅವಶ್ಯಕವೆಂದು ಹೇಳಿದರು.

ಬ್ರಿಕ್ಸ್ ಲಾಜಿಸ್ಟಿಕ್ ಪೂರೈಕೆ ಸರಪಳಿ ಸಹಕಾರ ಚೌಕಟ್ಟು ನಮ್ಮ ಪೂರೈಕೆ ಸರಪಳಿಗಳನ್ನು ಹೆಚ್ಚು ವಿಶ್ವಾಸಾರ್ಹ ಮತ್ತು ಸ್ಥಿತಿಸ್ಥಾಪಕವಾಗಿಸಲು ಸಹಾಯ ಮಾಡುತ್ತದೆ. ನಾವೀನ್ಯತೆಯ ಚೌಕಟ್ಟಿನಡಿಯಲ್ಲಿ, ಬ್ರಿಕ್ಸ್ ಇನ್ನು ಬೇಟರ್ ನೆಟ್‌ವರ್ಕ್ ನಮ್ಮ ಸ್ಟಾರ್ಟ್‌ಅಪ್‌ಗಳು ಮತ್ತು ಇನ್ನುಬೇಟರ್‌ಗಳನ್ನು ಸಂಪರ್ಕಿಸುತ್ತದೆ. ಜಾಗತಿಕ ದಕ್ಷಿಣ ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ಬ್ರಿಕ್ಸ್ ಒಟ್ಟಾಗಿ ಕೆಲಸ ಮಾಡಬೇಕು. ಬ್ರಿಕ್ಸ್ ನಲ್ಲಿ ಜಾಗತಿಕ ದಕ್ಷಿಣದ ವಿಶ್ವಾಸ ಹೆಚ್ಚಾಗಿದೆ ಎಂದು ಅವರು ಹೇಳಿದರು.

ಅಮೆರಿಕಾ-ಇರಾನ್ ಸಂಘರ್ಷ ಸೇರಿ ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಬಗ್ಗೆ ಬ್ರಿಕ್ಸ್ ರಾಷ್ಟ್ರಗಳು ಕಳವಳ ವ್ಯಕ್ತಪಡಿಸಿವೆ. ಸಂಘರ್ಷ ಮತ್ತಷ್ಟು ಉಲ್ಬಣಗೊಳ್ಳುವಂತಹ ಕ್ರಮಗಳನ್ನು ತಪ್ಪಿಸಿ ಗರಿಷ್ಠ ಸಂಯಮ ವಹಿಸುವಂತೆ ಕರೆ ನೀಡಿವೆ. ನಾಗರಿಕರು ಮತ್ತು ನಾಗರಿಕ ಮೂಲಸೌಕರ್ಯಗಳ ರಕ್ಷಣೆಗೆ ಒತ್ತು ನೀಡಲಾಗಿದ್ದು, ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ದೀರ್ಘಕಾಲಿಕ ಪರಿಹಾರ ಕಂಡುಕೊಳ್ಳುವ ಅಗತ್ಯವನ್ನು ಘೋಷಣೆ ಒತ್ತಿ ಹೇಳಿದೆ. ಜಾಗತಿಕ ವ್ಯಾಪಾರ, ಸರಬರಾಜು ಸರಪಳಿ ಹಾಗೂ ಇಂಧನ ಹರಿವು ನಿರಂತರವಾಗಿರಬೇಕೆಂದು ತಿಳಿಸಲಾಗಿದೆ.

ಗಾಜಾದಲ್ಲಿ ಕದನ ವಿರಾಮ ಮುಂದುವರಿಯಬೇಕು ಮತ್ತು ಮಾನವೀಯ ನೆರವು ಯಾವುದೇ ಅಡೆತಡೆಯಿಲ್ಲದೆ ತಲುಪಬೇಕು. ಪ್ಯಾಲೆಸ್ತೀನಿಯರ ಬಲವಂತದ ಸ್ಥಳಾಂತರಕ್ಕೆ ವಿರೋಧ ವ್ಯಕ್ತಪಡಿಸಿರುವ ಘೋಷಣೆ, ಎರಡು ರಾಷ್ಟ್ರಗಳ ಪರಿಹಾರಕ್ಕೆ ಬೆಂಬಲವನ್ನೂ ಪುನರುಚ್ಚರಿಸಿದೆ. ಯುದ್ಧದ ಸಂದರ್ಭದಲ್ಲಿ ಅಂತರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಸುರಕ್ಷತಾ ಮೇಲ್ವಿಚಾರಣೆಯಲ್ಲಿರುವ ಶಾಂತಿಯುತ ಪರಮಾಣು ಸೌಲಭ್ಯಗಳು ಹಾಗೂ ನಾಗರಿಕ ಮೂಲಸೌಕರ್ಯಗಳ ಮೇಲಿನ ದಾಳಿಯ ಬಗ್ಗೆ ಬ್ರಿಕ್ಸ್ ಗಂಭೀರ ಕಳವಳ ವ್ಯಕ್ತಪಡಿಸಿ, ಪರಮಾಣು ಸುರಕ್ಷತೆ ಮತ್ತು ಭದ್ರತಾ ಮಾನದಂಡಗಳನ್ನು ಯಾವುದೇ ಸಂದರ್ಭದಲ್ಲೂ ಕಾಪಾಡಬೇಕೆಂದು ಹೇಳಿದೆ.



**ಮೋದಿ-ಕ್ಸಿ ಮಾತುಕತೆ: ಭಿನ್ನಾಭಿಪ್ರಾಯ ವಿವಾದವಾಗದಂತೆ ಒತ್ತು**

ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಗಡಿ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ, ವ್ಯಾಪಾರ ಅಸಮತೋಲನ, ಮಾರುಕಟ್ಟೆ ಪ್ರವೇಶ ಹಾಗೂ ಜನರ ನಡುವಿನ ಸಂಪರ್ಕ ಸೇರಿದಂತೆ ಹಲವು ವಿಚಾರಗಳು ಚರ್ಚೆಯಾದವು. ಎರಡೂ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ವಿವಾದವಾಗಿ ಪರಿವರ್ತಿಸದಂತೆ ನಿರ್ವಹಿಸುವ ಅಗತ್ಯದ ಬಗ್ಗೆ ಒತ್ತು ನೀಡಲಾಗಿದೆ ಎಂದು ವರದಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಬ್ರಿಕ್ಸ್ ವೇದಿಕೆಯಲ್ಲಿ ಜಾಗತಿಕ ದಕ್ಷಿಣದ ರಾಷ್ಟ್ರಗಳು ಜಾಗತಿಕ ನಿಯಮ ರೂಪಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾತ್ರ ವಹಿಸಬೇಕೆಂದು ಪ್ರತಿಪಾದಿಸಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿ ಸೇರಿ ಜಾಗತಿಕ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಹೆಚ್ಚಿನ ಪ್ರಾತಿನಿಧ್ಯಕ್ಕೆ ಘೋಷಣೆಯಲ್ಲಿ ಒತ್ತು ನೀಡಲಾಗಿದೆ.

ಪ್ರಸ್ತುತ ಬ್ರಿಕ್ಸ್‌ನಲ್ಲಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ ಜೊತೆಗೆ ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್ ಮತ್ತು ಯುಎಇ ಸೇರಿವೆ. ವಿಸ್ತರಿತ ಗುಂಪಿನಲ್ಲಿ ರಾಜಕೀಯ ಭದ್ರತೆ, ಆರ್ಥಿಕ ಹಣಕಾಸು ಮತ್ತು ಸಾಂಸ್ಕೃತಿಕ ಜನರ ನಡುವಿನ ಸಂಪರ್ಕ ಎಂಬ ಮೂರು ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸುವ ಬದ್ಧತೆಯನ್ನು ನವದೆಹಲಿ ಘೋಷಣೆ ದಾಖಲಿಸಿದೆ.

ಏಕಪಕ್ಷೀಯ ಸುಂಕ ಹಾಗೂ ಸುಂಕೇತರ ವ್ಯಾಪಾರ ನಿರ್ಬಂಧಗಳು ಜಾಗತಿಕ ವ್ಯಾಪಾರ ಮತ್ತು ಸರಬರಾಜು ಸರಪಳಿಗೆ ಅನಿಶ್ಚಿತತೆ ಉಂಟುಮಾಡುತ್ತಿವೆ ಎಂದು ಘೋಷಣೆಯಲ್ಲಿ ಹೇಳಲಾಗಿದೆ. UL ನಿಯಮಗಳಿಗೆ ಅನುಗುಣವಾದ ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವನ್ನು ಸದಸ್ಯ ರಾಷ್ಟ್ರಗಳು ಪ್ರತಿಪಾದಿಸಿವೆ. ಇರಾನ್ ಮತ್ತು ಇಥಿಯೋಪಿಯಾ ವಿಶ್ವ ವ್ಯಾಪಾರ ಸಂಸ್ಥೆಗೆ ಸೇರುವ ಪ್ರಯತ್ನಕ್ಕೆ ಬ್ರಿಕ್ಸ್ ರಾಷ್ಟ್ರಗಳು ಬೆಂಬಲ ವ್ಯಕ್ತಪಡಿಸಿವೆ. ಆಫ್ರಿಕಾದ 53 ರಾಷ್ಟ್ರಗಳಿಗೆ ಚೀನಾ ನೀಡಿರುವ ಶೂನ್ಯ-ಸುಂಕ ವ್ಯಾಪಾರ ಸೌಲಭ್ಯವನ್ನೂ ಘೋಷಣೆ ಸ್ವಾಗತಿಸಿದೆ.

ಭಯೋತ್ಪಾದನಾ ಕೃತ್ಯಗಳನ್ನು ಅಪರಾಧ ಮತ್ತು ಸಮರ್ಥಿಸಲಾಗದ ಕೃತ್ಯಗಳೆಂದು ಖಂಡಿಸಿದ್ದು, ಭಯೋತ್ಪಾದನೆ ವಿರುದ್ಧ ಅಂತರಾಷ್ಟ್ರೀಯ ಸಮನ್ವಯವನ್ನು ಮತ್ತಷ್ಟು ಬಲಪಡಿಸುವ ಅಗತ್ಯವನ್ನು ಒತ್ತಿಹೇಳಿದೆ.

### ಮುಂದಿನ ವರ್ಷ ಚೀನಾದಲ್ಲಿ ಬ್ರಿಕ್ಸ್

2026ರ ಭಾರತದ ಅಧ್ಯಕ್ಷತೆಯ ಅವಧಿಯ ನಂತರ 2027ರಲ್ಲಿ ಚೀನಾ ಬ್ರಿಕ್ಸ್ ಅಧ್ಯಕ್ಷತೆ ವಹಿಸಲಿದೆ. ಮುಂದಿನ ಬ್ರಿಕ್ಸ್ ಶೃಂಗಸಭೆ ಚೀನಾದಲ್ಲಿ ನಡೆಯಲಿದೆ ಎಂದು ನವದೆಹಲಿ ಘೋಷಣೆಯಲ್ಲಿ ಅಧಿಕೃತವಾಗಿ ದಾಖಲಿಸಲಾಗಿದೆ.

ಒಟ್ಟಾರೆ ದೆಹಲಿ ಶೃಂಗಸಭೆಯ ಪ್ರಮುಖ ಫಲಿತಾಂಶವಾಗಿ, ವಿಸ್ತರಿತ ಬ್ರಿಕ್ಸ್ ಗುಂಪು ಪಶ್ಚಿಮ ಏಷ್ಯಾ ಸಂಘರ್ಷ, ಗಾಜಾ, ಪರಮಾಣು ಸುರಕ್ಷತೆ, ಭಯೋತ್ಪಾದನೆ ಮತ್ತು ಜಾಗತಿಕ ವ್ಯಾಪಾರ ಕುರಿತಂತೆ ಸಾಮಾನ್ಯ ನಿಲುವು ರೂಪಿಸಿದೆ. ಇದೇ ವೇಳೆ ಮೋದಿ-ಕ್ಸಿ ಮಾತುಕತೆ ಭಾರತ-ಚೀನಾ ಸಂಬಂಧಗಳಲ್ಲಿನ ಮುಂದಿನ ರಾಜತಾಂತ್ರಿಕ ಸಂವಾದಕ್ಕೂ ಗಮನ ಸೆಳೆದಿದೆ.

## ಗಣೇಶ ಮೂರ್ತಿ ಖರೀದಿ ಭರಾಟೆ



» ಮೊದಲನೇ ಪುಟದಿಂದ

**ಆಕರ್ಷಕ ಗಣೇಶ ವಿಗ್ರಹ**

ಮಾರುಕಟ್ಟೆಯಲ್ಲಿ ಈ ಬಾರಿ ಬಗೆ ಬಗೆಯ ಗಣೇಶ ಮೂರ್ತಿಗಳು ಲಗ್ಗೆ ಇಟ್ಟಿವೆ. ಸಿಂಹಾಸನದ ಮೇಲಿನ, ನವಿಲು, ಶಿವನ ಪಕ್ಕದಲ್ಲಿ ಕುಳಿತ ಮಾದರಿಯ ಗಣೇಶ ಮೂರ್ತಿಗಳನ್ನು ಕಾಣಬಹುದಾಗಿದೆ. 6 ರಿಂದ 8 ಅಡಿ ಎತ್ತರದ ಮೂರ್ತಿಗಳಿದ್ದು 20 ರಿಂದ 25 ಸಾವಿರ ರೂ. ವರೆಗೆ ಮಾರಾಟವಾಗುತ್ತಿವೆ.

**ಬೆಲೆ ಏರಿಕೆ ನಡುವೆ ಖರೀದಿ**

ಮನೆಯಲ್ಲಿ ಪ್ರತಿಷ್ಠಾಪಿಸುವ ಸಣ್ಣ ಗಾತ್ರದ ಗಣೇಶ ಮೂರ್ತಿಗೆ ಈ ಬಾರಿ ಬೆಲೆಯಲ್ಲಿ ಏರಿಕೆ ಕಂಡುಬಂತು. ಕಳೆದ ವರ್ಷ 250 ರಿಂದ 300 ರೂ.ಗೆ ದೊರೆಯುತ್ತಿದ್ದ ಗೌರಿ-ಗಣೇಶ ಮೂರ್ತಿಗಳು ಈ ಸಲ 500 ರೂ.ನಂತೆ ಮಾರಾಟವಾದವು. ಕಾರ್ಮಿಕರ ಕೂಲಿ, ಜೇಡಿ ಮಣ್ಣಿಗೆ ಬೇಡಿಕೆ ಹಾಗು ಅಗತ್ಯ ವಸ್ತುಗಳ ಬೆಲೆ ಹೆಚ್ಚಿರುವುದರಿಂದ ಬೆಲೆಯಲ್ಲಿ ಏರಿಕೆ ಮಾಡಲಾಗಿದೆ ಎಂದು ವ್ಯಾಪಾರಿಗಳು ಹೇಳಿದರು. ಅದೇ ರೀತಿ ಪೂಜಾ ಸಾಮಾಗ್ರಿ ಬೆಲೆಗಳು ಹೆಚ್ಚಿನ ಬೆಲೆಗೆ ಮಾರಾಟವಾದವು.

## ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥರಾಗಿ ಮಧುಸೂದನ್

• ಪ್ರಜೋದಯ ವರದಿ



**ಹಾಸನ:** ಆಕಾಶವಾಣಿ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥರಾಗಿ ಅರಕಲಗೂಡು ವಿ. ಮಧುಸೂದನ್ ಅವರು ನೇಮಕಗೊಂಡಿದ್ದಾರೆ.

ಹೊಸ ನೇಮಕಾತಿ ಕುರಿತು ಪ್ರಸಾರ ಭಾರತಿ ಆದೇಶ ಹೊರಡಿಸಿದೆ. ಭದ್ರಾವತಿ, ಮಡಿಕೇರಿ ಮತ್ತು ಹಾಸನ ಆಕಾಶವಾಣಿ ಕೇಂದ್ರಗಳಿಗೆ ನೂತನ ಕಾರ್ಯಕ್ರಮ ಮುಖ್ಯಸ್ಥರ ನೇಮಕ ಮಾಡಲಾಗಿದೆ. ಇದುವರೆಗೆ ಕಾರ್ಯಕ್ರಮ ನಿರ್ವಾಹಕರಾಗಿದ್ದ ಅರಕಲಗೂಡು ವಿ. ಮಧುಸೂದನ್ ಪದೋನ್ನತಿ ಪಡೆದು ಹಾಸನ ಆಕಾಶವಾಣಿ ನಿಲಯದ ಕಾರ್ಯಕ್ರಮ ಮುಖ್ಯಸ್ಥರಾಗಿದ್ದಾರೆ. ಹಾಸನ ಆಕಾಶವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸುಜಾತ ಎಫ್. ತಳವಾರ್ ಮಡಿಕೇರಿ ಆಕಾಶವಾಣಿ, ಎಲ್.ಓ.ನಂದನ್ ಕುಮಾರ್ ಭದ್ರಾವತಿ ಆಕಾಶವಾಣಿ ಕೇಂದ್ರಗಳಿಗೆ ಕಾರ್ಯಕ್ರಮ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

ಅರಕಲಗೂಡು ಪಟ್ಟಣದ ಮಧುಸೂದನ್, ಆಕಾಶವಾಣಿಯ ಹಲವು ಜನಪ್ರಿಯ ಕಾರ್ಯಕ್ರಮಗಳ ಮೂಲಕ ಗುರುತಿಸಿ ಕೊಂಡಿದ್ದಾರೆ. ಪ್ರಸಾರ ಭಾರತಿಯಿಂದ ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಮೈಸೂರು ವಿಶ್ವ ವಿದ್ಯಾನಿಲಯದಿಂದ ಅರ್ಥಶಾಸ್ತ್ರ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯಗಳಲ್ಲಿ ಎರಡು ಸ್ನಾತಕ ಪದವಿ ಮತ್ತು ಎಂಫಿಲ್ ಪದವಿ ಗಳಿಸಿದ್ದಾರೆ.

## ವಾರಕ್ಕೊಂದು ಪುಸ್ತಕ ಓದುವ ಬನ್ನಿ ಅಭಿಯಾನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳಲ್ಲಿ ಓದುವ ಹವ್ಯಾಸ, ಪುಸ್ತಕ ಪ್ರೀತಿ ಹಾಗು ಜ್ಞಾನಾಸಕ್ತಿ ಬೆಳೆಸುವ ಉದ್ದೇಶದಿಂದ ಅಭಿಗಾಮಿ ಫೌಂಡೇಶನ್ ವತಿಯಿಂದ ವಾರಕ್ಕೊಂದು ಪುಸ್ತಕ ಓದುವ ಬನ್ನಿ ಎಂಬ ಪುಸ್ತಕ ಓದುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.



ಪ್ರತಿ ವಾರ ಒಂದು ಉತ್ತಮ ಪುಸ್ತಕವನ್ನು ಪರಿಚಯಿಸಿ, ಅದರ ಕುರಿತು ಓದು, ಚರ್ಚೆ ಹಾಗು ವಿಚಾರ ವಿನಿಮಯ ನಡೆಸುವ ಮೂಲಕ ಮಕ್ಕಳು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ಈ ವಾರ ಖ್ಯಾತ ಸಾಹಿತಿ ಕುವೆಂಪು ಅವರ ಧನ್ವಂತರಿ ಚಿಕಿತ್ಸೆ ಸಣ್ಣ ಕಥೆಯನ್ನು ಓದಿ, ಕಥೆಯ ಆಶಯದ ಜೊತೆಗೆ ಅದರಲ್ಲಿರುವ ಸಾಮಾಜಿಕ ಹಾಗು ಮಾನವೀಯ ಮೌಲ್ಯಗಳ ಕುರಿತು ಚರ್ಚೆ ನಡೆಸಲಾಯಿತು. ಕಥೆಯ ಮೂಲಕ ಸಮಾಜ, ಮನುಷ್ಯನ ಬದುಕು ಹಾಗು ಮಾನವೀಯ ಸಂಬಂಧಗಳ ಕುರಿತು ಚಿಂತನೆ ನಡೆಸುವ ಅವಕಾಶವನ್ನು ಭಾಗವಹಿಸಿದ್ದವರಿಗೆ ಕಲ್ಪಿಸಲಾಯಿತು.

ವಾರಕ್ಕೊಂದು ಪುಸ್ತಕ ಓದುವ ಬನ್ನಿ ಕಾರ್ಯಕ್ರಮವು ಪ್ರತಿ ಗುರುವಾರ ಸಂಜೆ 5.30ಕ್ಕೆ ನಡೆಯಲಿದೆ. ಪುಸ್ತಕಾಸಕ್ತರು, ವಿದ್ಯಾರ್ಥಿಗಳು, ಪೋಷಕರು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಓದುವ ಸಂಸ್ಕೃತಿಯನ್ನು ಬೆಳೆಸುವ ಈ ಪ್ರಯತ್ನಕ್ಕೆ ಕೈಜೋಡಿಸಬೇಕೆಂದು ಅಭಿಗಾಮಿ ಫೌಂಡೇಶನ್ ಮನವಿ ಮಾಡಿದೆ.

ಈ ಕುರಿತು ಫೌಂಡೇಶನ್‌ನ ಪ್ರಮುಖರಾದ ಹೆಚ್.ಡಿ.ವೆಂಕಟೇಶ್ ಪ್ರಸಾದ್, ಸಂತೋಷ್ ದಿಂಡಗೂರು ಹಾಗು ಹಳ್ಳಿ ವೆಂಕಟೇಶ್ ಅವರು ಮಾತನಾಡಿ, ಓದಿನ ಮೂಲಕ ಅರಿವು ಮತ್ತು ಅರಿವಿನ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಬಹುದು. ಈ ನಿಟ್ಟಿನಲ್ಲಿ ವಾರಕ್ಕೊಂದು ಪುಸ್ತಕ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುವುದು. ಅದರೊಂದಿಗೆ ಸಮಾಜದ ಒಳಿತಿಗಾಗಿ ವಿವಿಧ ಶೈಕ್ಷಣಿಕ, ಸಾಂಸ್ಕೃತಿಕ ಹಾಗು ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸಲಾಗುವುದೆಂದರು.

ಕಾರ್ಯಕ್ರಮದಲ್ಲಿ ಪುಸ್ತಕಾಸಕ್ತರು, ಕನ್ನಡಾಭಿಮಾನಿಗಳು, ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಉಪಸ್ಥಿತರಿದ್ದರು.

### ಆಗಸ್ಟ್‌ನಲ್ಲಿ ಸರಕು ಸಾಗಣೆಯು ಶೇ.5.4 ರಷ್ಟು ಹೆಚ್ಚಳ

**ನವದೆಹಲಿ :** ಆಗಸ್ಟ್‌ನಲ್ಲಿ ಭಾರತೀಯ ರೈಲ್ವೇಯ ಸರಕು ಸಾಗಣೆಯ ದಟ್ಟಣೆಯು ವಾರ್ಷಿಕ 5.4 ಶೇಕಡಾ ಹೆಚ್ಚಳವನ್ನು ದಾಖಲಿಸಿದೆ. ಈ ಅವಧಿಯಲ್ಲಿ ಪ್ರಯಾಣಿಕರ ದಟ್ಟಣೆಯೂ ಹೆಚ್ಚಾಗಿದೆ. ಇದು ದೇಶಾದ್ಯಂತ ರೈಲು ಸಾರಿಗೆಯ ನಿರಂತರ ಬೇಡಿಕೆಯನ್ನು ಪ್ರತಿಬಿಂಬಿಸುತ್ತದೆ. ಈ ಮಾಹಿತಿಯನ್ನು ರೈಲ್ವೆ ಸಚಿವಾಲಯ ಭಾನುವಾರ ನೀಡಿದೆ.

2026ರ ಆಗಸ್ಟ್‌ನಲ್ಲಿ ರೈಲ್ವೆ 13.79 ಕೋಟಿ ಟನ್‌ಗಳಷ್ಟು ಸರಕುಗಳನ್ನು ಸಾಗಿಸಿದ್ದರೆ, ಕಳೆದ ವರ್ಷ ಇದೇ ತಿಂಗಳಲ್ಲಿ ಈ ಸಂಖ್ಯೆ 13.09 ಕೋಟಿ ಟನ್‌ಗಳಷ್ಟಿತ್ತು. ತಿಂಗಳ ಅವಧಿಯಲ್ಲಿ, ಸರಕು ಸಾಗಣೆ ಆದಾಯವು ವಾರ್ಷಿಕ ಆಧಾರದ ಮೇಲೆ 6.27 ಶೇಕಡಾ ಹೆಚ್ಚಳವನ್ನು ದಾಖಲಿಸಿದೆ. ಸರಕು ಸಾಗಣೆಯ ಬೆಳವಣಿಗೆಯು ಹಲವಾರು ಪ್ರಮುಖ ಸರಕುಗಳ ಹೆಚ್ಚಿನ ಲೋಡಿಂಗ್‌ನಿಂದ ಬೆಂಬಲಿತವಾಗಿದೆ.

## ಯೋಗದಿಂದ ಆರೋಗ್ಯಯುತ ಜೀವನ ಸಾಧ್ಯ

• ಪ್ರಜೋದಯ ವರದಿ

**ಆಲೂರು:** ಪೌಷ್ಟಿಕಾಂಶಯುಕ್ತ ಆಹಾರ ಸೇವನೆ, ನಿತ್ಯ ಯೋಗಾಭ್ಯಾಸ ಹಾಗು ಸದಾ ಚಟುವಟಿಕೆಯಿಂದ ಕೂಡಿದ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದರಿಂದ ಆರೋಗ್ಯ ಸುಧಾರಣೆಯಾಗುತ್ತದೆಂದು ಅಡಗೂರು ಯೋಗ ಚೇತನ ಕೇಂದ್ರದ ರಾಜ್ಯ ಸಂಚಾಲಕ ಚೇತನ್ ಗುರೂಜಿ ಅವರು ಹೇಳಿದರು.

ಪಟ್ಟಣದ ಬಿಕ್ಕೋಡು ರಸ್ತೆಯಲ್ಲಿರುವ ಆಲೂರು ಲಯನ್ ಸೇವಾ ಸಂಸ್ಥೆಯಿಂದ ಆಯೋಜಿಸಿದ್ದ ಆರೋಗ್ಯಕ್ಕಾಗಿ ಯೋಗಾಸನ, ಪ್ರಾಣಾಯಾಮ ಹಾಗು ಧ್ಯಾನ ಶಿಬಿರದಲ್ಲಿ ಮಾತನಾಡಿ, ಪ್ರತಿನಿತ್ಯ ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಹಾಗು ಮಾನಸಿಕ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತದೆ ಎಂಬುದನ್ನು ನಮ್ಮ ಪೂರ್ವಜರು ಪ್ರತಿಪಾದಿಸಿಕೊಂಡು ಬಂದಿದ್ದಾರೆಂದರು.



ಲಯನ್ಸ್ ಸಂಸ್ಥೆಯ ಅಧ್ಯಕ್ಷ ಆನಂದ್ ಅವರು ಮಾತನಾಡಿ, ಕಳೆದ 15 ವರ್ಷಗಳಿಂದ ಆಲೂರು ಲಯನ್ಸ್ ಕ್ಲಬ್ ವತಿಯಿಂದ ನಿರಂತರವಾಗಿ ಆರೋಗ್ಯಕ್ಕಾಗಿ ಯೋಗ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಈ ವರ್ಷವೂ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಅದರ ಪ್ರಯೋಜನ ಪಡೆದು ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕೆಂದರು.

ಲಯನ್ಸ್ ಭವನದಲ್ಲಿ ಚೇತನ್ ಗುರೂಜಿ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಶಿಬಿರವು ನಿತ್ಯ ಬೆಳಿಗ್ಗೆ 5.15 ರಿಂದ 7 ಗಂಟೆವರೆಗೆ 15 ದಿನಗಳ ಕಾಲ ನಡೆಯಲಿದೆ ಎಂದರು. ಲಯನ್ಸ್ ಸಂಸ್ಥೆಯ ಮಾಜಿ ಅಧ್ಯಕ್ಷ ರೇಣುಕಾ ಪ್ರಸಾದ್, ವಕೀಲ ಮಂಜೇಗೌಡ, ಕಾರ್ಯದರ್ಶಿ ರಾಮಚಂದ್ರ, ಗಿರೀಶ್, ಖಜಾಂಚಿ ಎಸ್.ಎಂ.ಪ್ರಭು, ಬೈರಾಪುರ ಪ್ರಾಂತೀಯ ಅಧ್ಯಕ್ಷ ರಘು ಪಾಳ್ಯ ಮತ್ತಿತರರಿದ್ದರು.

## ಬಾಲ ಮಂದಿರಗಳಿಗೂ ಪುಸ್ತಕ ತಲುಪಲಿ: ರೂಪ ಹಾಸನ

» ಮೊದಲನೇ ಪುಟದಿಂದ

ನಿಡಸಾಲೆ ಪುಟ್ಟಸ್ವಾಮಯ್ಯ ಅವರು, ಸಂಘದ ಕಾರ್ಯಗಳ ಮಾಹಿತಿ ನೀಡಿದರು.

ಯುವ ಸಬಲೀಕರಣ ಹಾಗು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಆನಂದ ಮೂರ್ತಿ ಅವರು ಮಾತನಾಡಿ, ಪಠ್ಯದ ಹೊರತಾಗಿಯೂ ಇತರೆ ಪುಸ್ತಗಳನ್ನು ವಿದ್ಯಾರ್ಥಿಗಳು ಓದಲು ಅನುವು ಮಾಡಿಕೊಡಬೇಕೆಂದರು.

ಸಾಹಿತಿ ಹಾಡ್ಲಹಳ್ಳಿ ನಾಗರಾಜ್ ಅವರು ಮಾತನಾಡಿ, ನಾವು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಗಿನ ಶಿಕ್ಷಕರು ಸಾಹಿತ್ಯದ ಅಭಿರುಚಿ ಹೊಂದಿದ್ದವರಾಗಿದ್ದರು. ಅವರು ಶಾಲೆಯಲ್ಲಿ ಕಲಿಸಿಕೊಟ್ಟ ಕುವೆಂಪು, ಕಾರಂತ ಮುಂತಾದ ಸಾಹಿತ್ಯ ಪಾಠಗಳು ಇಂದಿಗೂ ನೆನಪಿನಲ್ಲಿವೆ. ನಂತರ ವಿಜ್ಞಾನದ ವಿದ್ಯಾರ್ಥಿಯಾದ ನಂತರವೂ ತಾನು ಸಾಹಿತ್ಯದ ಕಡೆಗೆ ಹೊರಳುವಂತೆ ಮಾಡಿತು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ಮಾತನಾಡಿ, ಇಂದು ಜ್ಞಾನ ಪಡೆಯಲು ಮೊಬೈಲ್ ಸೇರಿ ಹಲವು ಸಾಧನಗಳಿವೆ. ಐದು ನಿಮಿಷ ಮೊಬೈಲ್‌ನಲ್ಲಿ ಹುಡುಕಿದರೂ ನಮಗೆ ಬೇಕಾದ ಮಾಹಿತಿ ಪಡೆದುಕೊಳ್ಳಬಹುದು. ಯಾವುದೇ ಪ್ರಶ್ನೆ ಕೇಳಿದರೂ ತಕ್ಷಣ ಉತ್ತರ ಸಿಗುತ್ತದೆ. ಶಿಕ್ಷಕರು ತರಗತಿಯಲ್ಲಿ ಪಾಠ ಮಾಡುವಾಗ ಅವರ ಮಾತಿನಲ್ಲಿ ಇರುವ ಭಾವನೆ, ಅನುಭವ ಮತ್ತು ಸಾಹಿತ್ಯದ ಸೊಗಡನ್ನು ಮೊಬೈಲ್‌ನಲ್ಲಿ ಅದೇ ರೀತಿಯಲ್ಲಿ ಪಡೆಯಲು ಸಾಧ್ಯವಿಲ್ಲವೆಂದರು.

ಓದು ಎನ್ನುವುದು ಅಭ್ಯಾಸ ಮಾತ್ರವಲ್ಲ, ಅದು ಸಂಸ್ಕಾರ. ಪುಸ್ತಕ ಓದುವಾಗ ಸಿಗುವ ರಸಾನುಭೂತಿಗೆ ಬೇರೆ ಯಾವ ಆಧುನಿಕ ಅನುಕೂಲಗಳಿಂದ ಸಿಗುವುದಿಲ್ಲ ಎಂದರು.

ಶಿಕ್ಷಣ ಇಲಾಖೆ ಅಧಿಕಾರಿ ಮಲ್ಲಮ್ಮ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೆಗೌಡ, ಸಾಹಿತಿ ಬೈರಮಂಗಲ ರಾಮೇಗೌಡ ಮತ್ತಿತರರಿದ್ದರು. ಸಪ್ನ ಬುಕ್ ಹೌಸ್‌ನ ರಾಮೇಗೌಡ ಸ್ವಾಗತಿಸಿದರು. ಪದ್ಮಲತಾ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

### ಗೂಡ್ಸ್ ಡಿಕ್ಕಿ : ವ್ಯಕ್ತಿ ಸಾವು

**ಹಾಸನ:** ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿ ಸ್ಕೂಟರ್ ಸವಾರ ಮೃತಪಟ್ಟಿರುವ ಘಟನೆ ನಗರದ ಬಿಟ್ಟಗೌಡನಹಳ್ಳಿ ಸಮೀಪ ಶನಿವಾರ ನಡೆದಿದೆ.

ಬಿಟ್ಟಗೌಡನಹಳ್ಳಿಯ ಮೈಲಾರಶೆಟ್ಟಿ ಮೃತಪಟ್ಟಿದ್ದಾರೆ. ಹಣ್ಣು ವ್ಯಾಪಾರಿ ಆಗಿದ್ದ ಅವರು ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿದೆ. ಸ್ಕೂಟರ್ ಸಮೇತ ರಸ್ತೆ ಮೇಲೆ ಬಿದ್ದ ಮೈಲಾರಶೆಟ್ಟಿ ಅವರನ್ನು ಸ್ಥಳೀಯರು ತಕ್ಷಣ ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

## ಮಾಜಿ ಶಾಸಕ ನೆ.ಲ.ನರೇಂದ್ರಬಾಬು ಕಾಂಗ್ರೆಸ್‌ಗೆ ಸೇರ್ಪಡೆ

**ಬೆಂಗಳೂರು :** ಮುಖ್ಯಮಂತ್ರಿಗ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಸಚಿವ ರಾಮಲಿಂಗಾರೆಡ್ಡಿ ಅವರ ಸಮ್ಮುಖದಲ್ಲಿ ಮಾಜಿ ಶಾಸಕ ನೆ.ಲ. ನರೇಂದ್ರಬಾಬುರವರಿಗೆ ಪಕ್ಷದ ಧ್ವಜ ನೀಡಿ ಕಾಂಗ್ರೆಸ್ ಪಕ್ಷ ಸೇರ್ಪಡೆ ಮಾಡಲಾಯಿತು.




ಇದೇ ಸಂದರ್ಭದಲ್ಲಿ ಮಹಾಲಕ್ಷ್ಮಿ ಲೇಔಟ್ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಅಪಾರ ಬೆಂಬಲಿಗರು, ಕಾರ್ಯಕರ್ತರು ಸೇರ್ಪಡೆಯಾದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಹೆಚ್.ಎಂ.ರೇವಣ್ಣ, ಮಾಜಿ ಸಚಿವೆ ರಾಣಿ ಸತೀಶ್, ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹನುಮಂತರಾಯಪ್ಪ ಮುಂತಾದವರಿದ್ದರು.

## ಯಾರಿಗೂ ನಿರ್ಬಂಧ ಹೇರುವುದಿಲ್ಲ : ಡಿ.ಕೆ.ಶಿ.

» ಮೊದಲನೇ ಪುಟದಿಂದ

ಕೊಂಡು ಬರುತ್ತಿದೆ. ಗಣೇಶ ಹಬ್ಬವನ್ನು ಬಹಳ ಶಾಂತಿಯುತವಾಗಿ ಆಚರಣೆ ಮಾಡಬೇಕು. ಮೆರವಣಿಗೆ ಹೋಗುವಾಗ ಶಿಸ್ತು ಪಾಲನೆ ಆಗಬೇಕು. ವಿದ್ಯುತ್ ಕಂಬ, ತಂತಿಗಳ ಬಗ್ಗೆ ಎಚ್ಚರ ವಹಿಸಬೇಕು. ಅಧಿಕಾರ ದುರುಪಯೋಗ ಮಾಡಿಕೊಂಡು ಯಾರಿಗೂ ನಿರ್ಬಂಧ ಹೇರುವುದಿಲ್ಲ. ಅದು ನಮ್ಮ ಕಾರ್ಯವೈಖರಿಯಲ್ಲ. ಬಿಜೆಪಿಯವರು ಕಾನೂನು ಚೌಕಟ್ಟಿನಲ್ಲಿ ಎಲ್ಲಿ ಬೇಕಾದರೂ ತಮ್ಮ ರಾಜಕೀಯ ಸಭೆ ಮಾಡಬಹುದು ಎಂದೂ ಮುಖ್ಯಮಂತ್ರಿ ಹೇಳಿದರು.

ಬಿಜೆಪಿ ಅಧ್ಯಕ್ಷರು ಅನಗತ್ಯವಾಗಿ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಕಾನೂನು ವ್ಯಾಪ್ತಿಯಲ್ಲಿ ಅವರು ಏನಾದರೂ ಮಾಡಬಹುದು, ಏನಾದರೂ ಹೇಳಬಹುದು. ಅವರು ಯಾವ ಮೈದಾನದಲ್ಲಿ ಕಾರ್ಯಕ್ರಮ ಮಾಡಿದರೂ ಅವರಿಗೆ ಅನುಮತಿ ನೀಡಿ ಎಂದು ನಾನೇ ಹೇಳಿದ್ದೇನೆ. ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಅನುಮತಿ ನೀಡಲಾದ ರೂಟ್ ಮ್ಯಾಪ್‌ನಂತೆಯೇ ಗಣಪತಿ ಮೆರವಣಿಗೆ ಸಾಗಬೇಕೆಂಬ ಪೊಲೀಸರ ನಿರ್ದೇಶನವನ್ನು ಬಿಜೆಪಿ ಧರ್ಮ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ.

# ಎನ್‌ಡಿಎ ನೇತೃತ್ವದ 21 ರಾಜ್ಯಗಳಲ್ಲಿ ಯುಸಿಸಿ ಜಾರಿ

## ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಕಲ್ಪ | ದೇಶ ಅಭಿವೃದ್ಧಿಯ ಗುಣಗಾನ

• ಪ್ರಜೋದಯ ವರದಿ

**ಮುಂಬೈ:** ಬಿಜೆಪಿ ನೇತೃತ್ವದ ಎನ್‌ಡಿಎ ಆಡಳಿತದಲ್ಲಿರುವ 21 ರಾಜ್ಯಗಳಲ್ಲೂ 2029ರೊಳಗೆ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.

ಮುಂಬೈನಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮದುವೆ, ವಿಚ್ಛೇದನ, ಆಸ್ತಿ ಹಕ್ಕು, ಉತ್ತರಾಧಿಕಾರ ಮತ್ತು ದತ್ತು ಸ್ವೀಕಾರ ಸೇರಿ ವೈಯಕ್ತಿಕ ಕಾನೂನುಗಳಿಗೆ ಧರ್ಮಭೇದವಿಲ್ಲದೆ ಒಂದೇ ರೀತಿಯ ಕಾನೂನು ರೂಪಿಸುವ ಉದ್ದೇಶವನ್ನು ಏಕರೂಪ ನಾಗರಿಕ ಸಂಹಿತೆ ಹೊಂದಿದೆ. ಈಗಾಗಲೇ ಹಲವು ರಾಜ್ಯಗಳಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲಾಗಿದೆ ಎಂದರು.

ಸರ್ಜಿಕಲ್ ಸ್ಟ್ರೈಕ್, ಏರ್‌ಸ್ಟ್ರೈಕ್ ಮತ್ತು ಆಪರೇಷನ್ ಸಿಂದೂರ ಮೂಲಕ ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ದೇಶ ತೋರಿಸಿದೆ. 2014ಕ್ಕೂ ಮುನ್ನ ಭಾರತದಲ್ಲಿ ಭ್ರಷ್ಟಾಚಾರ, ಜಾತೀಯತೆ ಮತ್ತು ಕುಟುಂಬ ರಾಜಕಾರಣ ಪ್ರಮುಖವಾಗಿದ್ದವು ಎಂದು ಆರೋಪಿಸಿದ ಶಾ, ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕಾರ್ಯಕ್ಷಮತೆ ಆಧಾರಿತ ರಾಜಕಾರಣಕ್ಕೆ ಆದ್ಯತೆ ನೀಡಲಾಗಿದೆ ಎಂದು ನುಡಿದರು.



**ಭಾರತ ಫಸ್ಟ್ ನೀತಿ**

ಭಾರತದ ವಿದೇಶಾಂಗ ಮತ್ತು ರಕ್ಷಣಾ ನೀತಿಗಳಿಗೆ ಈಗ ಬಲವಾದ ಬೆನ್ನೆಲುಬು ಸಿಕ್ಕಿದೆ. ಭಾರತ ಫಸ್ಟ್ ಎಂಬ ನೀತಿಯೇ ಸರ್ಕಾರದ ಕಾರ್ಯವೈಖರಿಗೆ ಮಾರ್ಗದರ್ಶಿಯಾಗಿದೆ. ದೇಶದ ಹಿತಾಸಕ್ತಿಗೆ ಆದ್ಯತೆ ನೀಡಲಾಗುತ್ತಿದೆ. ಒಂದು ಕಾಲದಲ್ಲಿ ಫ್ರಾಜೈಲ್ ಫೈವ್ ಆರ್ಥಿಕತೆಗಳಲ್ಲಿ ಒಂದಾಗಿದ್ದ ಭಾರತ ಇದೀಗ ವಿಶ್ವದ ಅಗ್ರ ಐದು ಆರ್ಥಿಕತೆಗಳಲ್ಲಿ ಸ್ಥಾನ ಪಡೆದಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ.7.8ರಷ್ಟು ಜಿಡಿಪಿ ಬೆಳವಣಿಗೆ ದಾಖಲಾಗಿದ್ದು, ಪ್ರಮುಖ ಆರ್ಥಿಕತೆಗಳಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದರು.

**ಆರ್ಟಿಕಲ್ 370, ನಕ್ಸಲಿಸಂ ಪ್ರಸ್ತಾಪ**

ಈ ವೇಳೆ ಆರ್ಟಿಕಲ್ 370, ನಕ್ಸಲಿಸಂ ಮತ್ತು ಈಶಾನ್ಯ ರಾಜ್ಯಗಳ ಪರಿಸ್ಥಿತಿಯನ್ನೂ ಅಮಿತ್ ಶಾ ಪ್ರಸ್ತಾಪಿಸಿದರು. ಹಲವು ದಶಕಗಳಿಂದ ದೇಶದ ಆಂತರಿಕ ಭದ್ರತೆಗೆ ಸವಾಲಾಗಿದ್ದ ಸಮಸ್ಯೆಗಳನ್ನು ಸರ್ಕಾರ ಎದುರಿಸಿದೆ ಎಂದು ಹೇಳಿದರು.

ಮಣಿಪುರ ವಿಧಾನಸಭೆ ಚುನಾವಣೆಗೂ ಮುನ್ನ 1951ರ ಆಧಾರದಲ್ಲಿ ರಾಷ್ಟ್ರೀಯ ನಾಗರಿಕರ ನೋಂದಣಿ ಜಾರಿಯಾಗಲಿದೆಯೇ ಎಂಬ ಪ್ರಶ್ನೆಗೆ ಶಾ ಉತ್ತರಿಸಿದರು. ಮಣಿಪುರದಲ್ಲಿರುವ ಸಹೋದ್ಯೋಗಿಗಳು ಮತ್ತು ವಿವಿಧ ರಾಜಕೀಯ ಪಕ್ಷಗಳೊಂದಿಗೆ ಈ ಕುರಿತು ಚರ್ಚೆ ನಡೆಯುತ್ತಿದೆ. ಯಾವ ನಿರ್ಧಾರ ಕೈಗೊಂಡ ಕೂಡಲೇ ಅದರ ಬಗ್ಗೆ ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

ಅಕ್ರಮ ವಲಸಿಗರ ವಿಚಾರದಲ್ಲೂ ಸರ್ಕಾರದ ನಿಲುವನ್ನು ಪುನರುಚ್ಚರಿಸಿದ ಅವರು, ದೇಶದಲ್ಲಿರುವ ಅಕ್ರಮ ವಲಸಿಗರನ್ನು ಗುರುತಿಸಿ ಹೊರಹಾಕಲಾಗುವುದು. ಆದರೆ ಅದಕ್ಕಾಗಿ ಪರಿಗಣಿಸಲಾಗುತ್ತಿರುವ ವಿಧಾನಗಳ ವಿವರಗಳನ್ನು ಬಹಿರಂಗಪಡಿಸಲಾಗುವುದಿಲ್ಲವೆಂದು ಹೇಳಿದರು.

**ಪ್ರತಿಭಟನೆಗೆ ಹಕ್ಕಿದೆ**

ಸರ್ಕಾರದ ವಿರುದ್ಧ ನಡೆಯುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ ಸೇರಿ ವಿವಿಧ ಪ್ರತಿಭಟನೆಗಳ ಕುರಿತು ಕೇಳಿದ ಪ್ರಶ್ನೆಗೆ, ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಪ್ರತಿಭಟಿಸುವ ಹಕ್ಕನ್ನು ಗೌರವಿಸಲಾಗುತ್ತದೆ. ತುರ್ತು ಪರಿಸ್ಥಿತಿ ಹೇರಲು ಸಾಧ್ಯವಿಲ್ಲ. ಅದು ಕಾಂಗ್ರೆಸ್‌ನ ಮನಸ್ಥಿತಿ ಎಂದು ಟೀಕಿಸಿದರು.

### ಸೆ.17ರಿಂದ ಸೇವಾ ಸಂಕಲ್ಪ ಅಭಿಯಾನ

ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಜೀವನವನ್ನು ಗುರುತಿಸಲು ಸೆ. 17ರಿಂದ ಅ.17ರ ವರೆಗೆ ದೇಶಾದ್ಯಂತ ಒಂದು ತಿಂಗಳ ಸೇವಾ ಸಂಕಲ್ಪ ಅಭಿಯಾನ ನಡೆಸಲಾಗುವುದು. ಸೆ. 17ರಂದು ಪ್ರಧಾನಿ ಮೋದಿಯವರ ಜನ್ಮದಿನದಂದು ಅಭಿಯಾನ ಆರಂಭವಾಗಲಿದೆ. ಬಿಜೆಪಿ, ಎನ್‌ಡಿಎ ಮಿತ್ರಪಕ್ಷಗಳು, ಸ್ವಯಂ ಸೇವಾ ಸಂಘಟನೆಗಳು ಮತ್ತು ದೇಶದ ಜನರು ಇದರಲ್ಲಿ ಭಾಗವಹಿಸಲಿದ್ದಾರೆ. ಈ ಅಭಿಯಾನವನ್ನು ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ, ಜಿಲ್ಲೆ, ಲೋಕಸಭೆ ಹಾಗೂ ವಿಧಾನಸಭಾ ಕ್ಷೇತ್ರಗಳಿಂದ ಹಿಡಿದು ಮತಗಟ್ಟೆ ಮಟ್ಟದವರೆಗೂ ಕೊಂಡೊಯ್ಯಲಾಗುವುದು. ಅಭಿಯಾನದಲ್ಲಿ 12 ವಿಭಾಗಗಳ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಮತಗಟ್ಟೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲೂ ಹಲವು ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

### ಇಡಿಯದ್ದು ಬರೀ ಆರೋಪವಷ್ಟೆ : ಸತೀಶ್

**ಬೆಂಗಳೂರು :** ಜಾರಿ ನಿರ್ದೇಶನಾಲಯ ತಮಗೆ ನೋಟಿಸ್ ನೀಡಿದರೆ ಅದಕ್ಕೆ ಕಾನೂನು ಬದ್ಧವಾಗಿ ಉತ್ತರ ನೀಡುತ್ತೇನೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಕಳೆದ ಎರಡು ದಿನಗಳು ಹಿಂದೆ ಇಡಿ ದಾಳಿ ನಡೆಸಿ ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಗೆ ಬೆಂಗಳೂರಿನಲ್ಲಿ ಭಾನುವಾರ ಪ್ರತಿಕ್ರಿಯೆ ನೀಡಿದ ಅವರು,ಇಡಿ ನನ್ನನ್ನು ಹೂಡಿಕೆದಾರ ಎಂದು ಹೇಳಿಲ್ಲ, ಅನುಮಾನ ವ್ಯಕ್ತಪಡಿಸಿದೆ ಅಷ್ಟೇ. ನಾನು ನೇರವಾಗಿ ಹೂಡಿಕೆ ಮಾಡಿದ್ದೇನೆ ಎಂದು ಹೇಳಿಲ್ಲ. ಅವರ ಪ್ರಶ್ನೆಗೆ ಉತ್ತರ ಅಲ್ಲೇ ಇದೆ. ನೋಟಿಸ್ ಕೊಟ್ಟು ಕರೆದರೆ ಹೋಗಿ ಸಾಕ್ಷಿ ಸಮೇತ ಸ್ಪಷ್ಟನೆ ನೀಡುತ್ತೇನೆಂದರು.

ತಮ್ಮ ವಿರುದ್ಧ ಶೇ.40ರಷ್ಟು ಷೇರು ಹೊಂದಿರುವ ಆರೋಪ ಕುರಿತು ಮಾತನಾಡಿದ ಅವರು, ಯಾರಾದರೂ ನನ್ನ ಹೆಸರಲ್ಲಿ ಶೇ.40ರಷ್ಟು ಇರುವ ದಾಖಲೆ ತೋರಿಸಲಿ.ಅದು ನನ್ನದಾಗಿದ್ದರೆ ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ಸ್ಪಷ್ಟತೆ ಇದೆ. ಇಲ್ಲಿ ಸಾಬೀತು ಮಾಡಲು ಆಗದು, ಇಡಿ ಕಚೇರಿಯಲ್ಲಿ ಸಾಬೀತು ಮಾಡುತ್ತೇನೆಂದು ಸವಾಲು ಹಾಕಿದರು.

## ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ :** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ) ಹಾಸನ ಜಿಲ್ಲೆ ವತಿಯಿಂದ ಜಿಲ್ಲ್ಯಾದ್ಯಂತ ವಾಸವಿರುವ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್ಖ್ ಹಾಗೂ ಪಾರ್ಸಿ ಜನಾಂಗದವರಿಗೆ 2026-27ನೇ ಸಾಲಿನಲ್ಲಿ ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಶ್ರಮಶಕ್ತಿ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ರೇಷ್ಮೆ ನೂಲು ಬಿಚ್ಚಾಣಿಕೆ ಉದ್ಯಮಕ್ಕೆ ಪ್ರೋತ್ಸಾಹ ಯೋಜನೆ, ಗಂಗಾ ಕಲ್ಯಾಣ ಯೋಜನೆ, ನವೋದಯ ಯೋಜನೆ, ಫಾಸ್ಟ್ ಫುಡ್ ಟ್ರಕ್ /ಟೈಲರ್ ಕಿಚನ್ ಫುಡ್ (ಕಿಯೋ ಸ್ಕ್) ಯೋಜನೆ, ಅಲ್ಪಸಂಖ್ಯಾತರ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಪ್ರೋತ್ಸಾಹ ಯೋಜನೆ, ಸಿಖ್ಖ್ ಲಿಗಾರ ಸಮುದಾಯದ ಜನರ ಆರ್ಥಿಕ ಸಬಲೀಕರಣಕ್ಕೆ ಪ್ರೋತ್ಸಾಹ ಯೋಜನೆ, ಸಮುದಾಯ ಆಧಾರಿತ ತರಬೇತಿ ಯೋಜನೆ, ವಿದೇಶಿ ವಿದ್ಯಾಭ್ಯಾಸ ಸಾಲ, ವ್ಯಾಪಾರ/ ಉದ್ದಿಮೆ ನೇರಸಾಲ ಯೋಜನೆ, ಸಾಂತ್ವನ ಯೋಜನೆಗಳಡಿ ಯಲ್ಲಿ ನಿಗಮದಿಂದ ಸಾಲ ಹಾಗೂ ಸಹಾಯಧನ ಸೌಲಭ್ಯಗಳನ್ನು ನೀಡಲು ಸೆ.17ರವರೆಗೆ ಆನ್‌ಲೈನ್ Website: kmdconline.karnataka.gov.in ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ . ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಹಾಸನ ಕಚೇರಿ ಹಾಗೂ ದೂರವಾಣಿ 08172-246333 ಯನ್ನು ಸಂಪರ್ಕಿಸಬಹುದಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019